I do not propose to take much time of the House except to support the amendment and also the amendment to the amendment so far as the claim of the State is concerned for a substantial aid from the Central Government. As I said at the very outset, even in the case of Coorg one must not go under the impression that only 1,000 out of 10,000 acres of wet land have been damaged. If that sort of a propaganda is made, it would show that our loss is not considerable. Similarly, there is no point in hushing up or giving a distortion or an under estimate of the actual damages this State as a whole has sustained. I concede that more than 50 per cent of the Districts of the State have sustained considerable loss and to give at least the bare minimum that is necessary, our demand so far as the aid from the Central Government is concerned, cannot be anything less than Rs. 10 crores. So I am only urging upon the Government as my leader has rightly done, to press the Government of India to give us a minimum assistance of Rs. 10 crores just to tide over this natural calamity that has overtaken the State. I am very thankful to the Speaker for giving me an opportunity to offer my remarks.

*ಶ್ರೀ ಟಿ. ಪಿ. ಬೋರಯ್ಯ (ಕೊಳ್ಳೇಗಾಲ).— ಸ್ವಾಮಿ, ಅಧ್ಯಕ್ಷರೇ, ಮೈಸೂರು ಜಿಲೆ ಯಲ್ಲಿ ಕಪಿಲಾ ಮತ್ತು ಕಾವೇರಿ ನದಿಗಳ ಪ್ರವಾಹದಿಂದ ನಂಜನ ಗೂಡು, ಟಿ. ನರಸೀಪುರ ಮತ್ತು ಕೊಳ್ಳೇಗಾಲ ತಾಲ್ಲೂಕುಗಳಲ್ಲಿ ಜನರಿಗೆ ಬಹಳ ನಷ್ಟ ಉಂಟಾ ಗಿದೆ. ಈ ವಿಚಾರದಲ್ಲಿ ಅನೇಕ ಅಂಶಗಳನ್ನು ಅನೇಕ ಮಾನ್ಯಸದಸ್ಯರುಗಳು ಈಗಾಗಲೇ ಈ ಮಾನ್ಯ ಸಭೆಯ ಗಮನಕ್ಕೆ ತಂದಿದ್ದಾರೆ. ಅದೇ ರೀತಿ ನಾನೂ ಸಹ ಕೆಲವು ಗ್ರಾಮಗಳಲ್ಲಿ ಸಂಚಾರ ಮಾಡಿದ್ದರಲ್ಲಿ ನನ್ನ ಕಣ್ಣಾರೆ ಕಂಡ ಕೆಲವು ವಿಚಾರಗಳನ್ನು ಈಗ ತಮ್ಮ ಗಮನಕ್ಕೆ ತರಬೇಕೆಂದು ನಿಂತಿದ್ದೇನೆ. ಈಗಾ ಗಲೇ ನಾನು ತಿಳಿಸಿದ ತಾಲ್ಲೂಕುಗಳ ಪೈಕಿ ಒಂದಕ್ಕೆ ಸೇರಿರತಕ್ಕ ಬೊಕ್ಕಹಳ್ಳಿ ಎಂಬ ಗ್ರಾಮ ಸಂಪೂರ್ಣ ವಾಗಿ ನಾಶವಾಗಿ ಜನಗಳು ಮನೆ-ಮಠಗಳಿಲ್ಲದೆ ಅನ್ಯರ ಮನೆಯ ಕಟ್ಟೆಗಳ ಮೇಲೆ ನಿಲ್ಲುವಂಥ ಪರಿ ಸ್ಥಿತಿ ಬಂದಿದೆ. ಈ ಜನಗಳಿಗೆ ಸಾಮಾನ್ಯವಾಗಿ ಅಲ್ಲಿಯ ಸಾರ್ವಜನಿಕರೂ, ಸ್ಥಳೀಯ ಸಂಸ್ಥೆಯವರೂ ಅಷ್ಟಿಷ್ಟು ಸಹಾಯಗಳನ್ನು ನೀಡಿದ್ದಾರೆ. ಈ ಜನರು ಇರತಕ್ಕ ಪರಿಸ್ಥಿತಿಯನ್ನು ನೋಡಿದರೆ ಅವರು ಚೇತ ರಿಸಿಕೊಳ್ಳಲು ತುಂಬಾ ಕಷ್ಟವುಂಟಾಗಿದೆ. ಈ ವಸತಿ ಸೌಕರ್ಯವನ್ನು ಕಳೆದುಕೊಂಡು ಅಲೆದಾಡುತ್ತಿರುವ ಜನಗಳಿಗೆ ಪುನರ್ವಸತಿಗಾಗಿ ಜಮೀನನ್ನು ಅಕ್ವಯಿರ್ ಮಾಡತಕ್ಕ ಕಾರ್ಯ ಬಹಳ ಜರೂರಾಗಿ ಆಗಬೇಕಾ ಗಿದೆ. ಇದೇ ರೀತಿ ಟಿ. ನರಸೀಪುರ ತಾಲ್ಲೂಕಿನಲ್ಲೂ ಸಹ ಅನೇಕ ಗ್ರಾಮಗಳು ಎಂದರೆ—ಸೋನಲೆ-ಮೊಳೆ, ಹೆಬ್ಬಾಗಿಲು-ಮೊಳೆ ಇಷ್ಟು ಗ್ರಾಮಗಳೂ ಮತ್ತು ಕೊಳ್ಳೇಗಾಲ ತಾಲ್ಲೂಕಿನಲ್ಲಿ ದಾನನಪುರ, ಹಂಪಾಪುರ, ಹನಗಳಲೆ ಇಷ್ಟು ಗ್ರಾಮಗಳೂ ಪ್ರವಾಹಕ್ಕೆ ಸಿಕ್ಕಿ ಸಂಪೂರ್ಣವಾಗಿ ಕೊಚ್ಚಿಹೋಗಿವೆ. ಕೊಳ್ಳೇಗಾಲ ತಾಲ್ಲೂಕಿನಲ್ಲ ಕೊಚ್ಚಿ ಹೋಗಿರತಕ್ಕ ಗ್ರಾಮಸ್ಥರು ಗಳೆಲ್ಲಾ ಈಗ ಕೊಳ್ಳೇಗಾಲಕ್ಕೆ ಬಂದು ಅಲ್ಲೊಂದು ಮೈದಾನದಲ್ಲಿ ಷೆಡ್ಡುಗಳನ್ನು ಹಾಕಿಕೊಂಡು ಇದ್ದಾರೆ. ಇನ್ನು ಕೆಲವರು ಕುಕ್ಕಲೂರು ಗ್ರಾಮದ ಒಬ್ಬ ದೊಡ್ಡ ಮನುಷ್ಯರ ಜಮೀನಿನಲ್ಲಿ ಷೆಡ್ಡುಗಳನ್ನು ಹಾಕಿಕೊಂಡಿ ದ್ದಾರೆ. ಆದರೆ ಈಗಾಗಲೇ ಆ ಜಮೀನಿನ ಮಾಲೀ ಕರು ಆ ಜನರ ಮೇಲೆ ಪೋಲೀಸ್ ಕಂಪ್ಲೇಂಟನ್ನು ಕೊಟ್ಟಿದ್ದಾರೆ. ವಾಸ್ತವಾಂಶಗಳು ಹೀಗೆಲ್ಲ ಇರುವುದ ರಿಂದ ಸರ್ಕಾರದವರು ಅತಿ ಜರೂರಾಗಿ ಈ ಜನಗಳಿ ಗೆಲ್ಲ ವಸತಿಗಾಗಿ ಜಮೀನನ್ನು ಒದಗಿಸಬೇಕಾಗಿದೆ. ಹಾಗಿಲ್ಲದೆ ಹೋದರೆ ಈ ಜನರಿಗೆ ಪ್ರವಾಹದ ಪರಿ ಣಾಮದಿಂದ ತೊಂದರೆ ಉಂಟಾಗಿದ್ದರೆ ಇವ ರಿಗೆ ಮತ್ತೊಂದು ಕಡೆ ಪೋಲೀಸರಿಂದ ತೊಂದರೆ ಗೊಳಗಾಗುವ ಪರಿಸ್ಥಿತಿ ಸಹ ಉಂಟಾಗುತ್ತದೆ. ಆದ ಕಾರಣ ಸರ್ಕಾರದವರು ಈ ಜನಗಳಿಗೆಲ್ಲ ಬಹಳ ತೀವ್ರ ವಾಗಿ ಜಾಗ ಒದಗಿಸಿ ಕೊಡಬೇಕೆಂದು ಕೇಳಿಕೊಳ್ಳು ತ್ತೇನೆ. ಆದರೆ ಮಾನ್ಯ ಮಂತ್ರಿಗಳು ಈಗಾಗಲೇ ಮೈಸೂರು ಜಿಲ್ಲೆಯಲ್ಲಿ ಮೂರು ಸಾವಿರ ಹಳ್ಳಿಗಳಲ್ಲಿ

ಮನೆಗಳಿಗೆ ಅಪಾಯವಾಗಿರುತ್ತದೆಂದೂ ಹನ್ನೆರಡು ಸಾವಿರ ಎಕರೆ ಜಮೀನು ತೊಂದರೆಗೀಡಾಗಿರುತ್ತದೆಂದೂ ತಿಳಿಸಿದರು. ಆದರೆ ಈ 12 ಸಾವಿರ ಎಕರೆ ಜೊತೆಗೆ ಇನ್ನೂ ನೀರು ಮುಳುಗಡೆಯಾಗಿರತಕ್ಕ ಜಮೀನು ಬಹಳವಾಗಿದೆ. ಅದುದರಿಂದ ಆ ಜಮೀನಿಗೆ ಏನು ಡ್ಯಾಮೇಜ್ ಆಗಿರುತ್ತದೆಂಬುದನ್ನು ಈಗ ತಿಳಿಸುವುದಕ್ಕೆ ಸಾಧ್ಯವಿಲ್ಲ. ಈ ನೀರು ಮುಳುಗಿರುವ ಪ್ರದೇಶದಲ್ಲಿದ್ದ ಸುಮಾರು ಒಂದು ಲಕ್ಷ ಇಪ್ಪತ್ತು ಸಾವಿರ ರೂಪಾಯಿಗಳಷ್ಟು ಬತ್ತದಬೆಳೆ ನಾಶವಾಗಿದೆ. ಹೀಗೆ ಯಾರುಯಾರು ಬೆಳೆಗಳನ್ನು ಕಳೆದುಕೊಂಡಿದ್ದಾರೋ ಅವರೆಲ್ಲರಿಗೂ ಸರ್ಕಾರದವರು ಕೂಡಲೆ ಬೀಜದ ಬತ್ತವನ್ನೊದಗಿಸಬೇಕಾಗಿದೆ. ಹೀಗೆ ನೀರು ಮುಳುಗಡೆ ಆಗಿರತಕ್ಕ ಪ್ರದೇಶದಲ್ಲಿ ರೈತರು ಪಟ್ಟಿರ ತಕ್ಕ ಶ್ರಮ, ಹಾಕಿರತಕ್ಕ ಗೊಬ್ಬರ ಮತ್ತು ಬೆಲ್ಲಿರ ತಕ್ಕ ಬೀಜ ಇತ್ಯಾದಿಗಳನ್ನೆಲ್ಲಾ ಲೆಕ್ಕ ಹಾಕಿದರೆ ಇದರ ಲುಕ್ಸಾನೂ ಸಹ ಕನಿಷ್ಠಪಕ್ಷ ಒಂದು ಲಕ್ಷಕ್ಕೆ ಕಡಮೆ ಇಲ್ಲವೆಂದು ಹೇಳಬಹುದಾಗಿದೆ. ಆದರೆ ನಾನಾಗಲೇ ಹೇಳಿದಂತೆ ಕೆಲವು ಜಮೀನುಗಳು ಸಂಪೂರ್ಣವಾಗಿ ನೀರಿನಿಂದ ಮುಚ್ಚಿಹೋಗಿರುವ ಕಾರಣ ಅವುಗಳ ಗೇನು ಅನಾಹುತವಾಗಿದೆ ಎಂಬುದು ಈಗ ಗೊತ್ತಾಗುವಂತಿಲ್ಲ. ಈಗಾಗಲೆ ಅನೇಕ ಜಮೀನುಗಳು ಕೊಚ್ಚಿ ಹೋಗಿವೆ. ಕೆಲವು ಕೊರಕಲು ಬಿದ್ದಿವೆ. ಇನ್ನು ಕೆಲವು ಜಮೀನುಗಳ ಮೇಲೆ 1, 2, 3, ಮತ್ತು 4 ಅಡಿಗಳ ಪ್ರಮಾಣ ಮರಳು ಬಂದು ಬಿದ್ದಿದೆ. ಹೀಗಾಗಿ ಅನೇಕ ಜನರು ಜಮೀನಿದ್ದರೂ ಇಲ್ಲದಂತಾಗಿದ್ದಾರೆ. ಈ ಮರಳನ್ನೆಲ್ಲಾ ತೆಗೆಸಬೇಕಾಗಿದ್ದರೆ ತುಂಬಾ ಖರ್ಚಾಗುತ್ತದೆ. ಈ ಕಾರ್ಯವಾದರೂ ನಿಧಾನವಾಗುವಂತಿಲ್ಲ. ಆದುದರಿಂದ ಸರ್ಕಾರದವರು ಇಂಥ ಪರಿಸ್ಥಿತಿಗಳಿರುವ ಕಡೆ ರೈತರಿಗೆ ಆ ಮರಳನ್ನು ಸಂಪೂರ್ಣವಾಗಿ ತೆಗೆಸಿ ತಗಲುವ ಪೂರಾ ಖರ್ಚಿದಲ್ಲಿ ಅರ್ಧಭಾಗವನ್ನು ಸರ್ಕಾರದವರೂ ಉಳಿದ ಅರ್ಧ ಭಾಗವನ್ನು ರೈತರಿಂದ ಕಂತುಗಳಲ್ಲಿ ವಸೂಲ್ಮಾಡಿಕೊಳ್ಳುವಂಥ ಒಂದು ಏರ್ಪಾಡನ್ನು ಮಾಡಬೇಕೆಂದು ನಾನು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಸಾಮಾನ್ಯವಾಗಿ ಹಿಂದೆಂದೂ ಇಂಥ ಭಾರಿ ಪ್ರಮಾಣದ ಪ್ರವಾಹ ಬಂದಿರಲಿಲ್ಲ. ಎಲ್ಲೋ 1911ರಲ್ಲಿ ಒಂದಾವರ್ತಿ, ಪುನಃ 1924ರಲ್ಲಿ ಮತ್ತು 1931ರಲ್ಲಿ ಮಾತ್ರ ದೊಡ್ಡ ಪ್ರವಾಹಗಳು ಬಂದಿದ್ದುವು. ಬಂದಿದ್ದರೂ ಆ ಪ್ರವಾಹದ ತೊಂದರೆಯೆಲ್ಲಾ ಕೇವಲ 2-3 ದಿವಸಗಳವರೆಗೆ ಮಾತ್ರ ಇತ್ತು. ಆದರೆ ಈಗ ಬಂದಿರತಕ್ಕ ಪ್ರವಾಹ ಹಾಗಿಲ್ಲ. ಒಂದು ವಾರಕ್ಕೆ ಮೇಲ್ಪಟ್ಟು ತೊಂದರೆ ಕೊಡುತ್ತಿದೆ. ಹೀಗಾಗಿ ಈ ಸಾರಿ ರೈತರು ತುಂಬಾ ಕಷ್ಟನಷ್ಟಗಳಿಗೊಳಗಾಗಿದ್ದಾರೆ. ಇಲ್ಲವಾದರೆ ಇಷ್ಟು ಭಾರಿ ಪ್ರಮಾಣದಲ್ಲಿ ನಷ್ಟವಾಗುತ್ತಿರಲಿಲ್ಲ. ಅನೇಕ ಮನೆಗಳಿಗೆ ತೊಂದರೆಯಾಗಿರುವುದೇ ಅಲ್ಲದೆ ನಮ್ಮಲ್ಲಿ ಪುರಾಣ ಪ್ರಸಿದ್ಧವಾದ ಅಗಸ್ತೇಶ್ವರನ್ನಾಮಿ ದೇವಸ್ಥಾನ ಕುಸಿದು ಬೀಳುವ ಸ್ಥಿತಿಯಲ್ಲಿದೆ. ಈಗಾಗಲೆ ಒಂದು ಭಾಗ ಕುಸಿದು ಬಿದ್ದಿದೆ. ಸರ್ಕಾರದವರು ಈ ಪುರಾಣ ಪ್ರಸಿದ್ಧ ದೇವಾಲಯವನ್ನು ಜಾಗ್ರತೆ ದುರಸ್ತು ಮಾಡಿಸಿ ಕೊಡಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಈ ದಿವಸ ಸರ್ಕಾರದವರು 40 ರೂಪಾಯಿಗಳಿಗೆ ಕಡಮೆ ಇಲ್ಲದಂತೆ ಪರಿಹಾರನೀಡತಕ್ಕ ಆಜ್ಞೆ ಹೊರಡಿಸಿರುವುದಾಗಿ ಹೇಳಿದರು. ಆದರೆ ಈಗ ನಮ್ಮಲ್ಲಿ ಕೆಲವು ಗ್ರಾಮಗಳಲ್ಲಿ ಜನರಿಗೆ ಕೇವಲ 3 ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಇನ್ನು ಕೆಲಪು ಕಡೆ ಹತ್ತು ರೂಪಾಯಿಗಳಿಗಿಂತ ಕಡಮೆ ಪರಿಹಾರ ನೀಡಿರತಕ್ಕ ನಿದರ್ಶನಗಳೂ ಇವೆ. ಆದರೆ ಸರ್ಕಾರದವರೇನೋ ಬಹಳ ಮೆಹನತ್ತಿನಿಂದ ಕೆಲಸ ಮಾಡುತ್ತಿದ್ದಾರೆ. ಈ ವಿಚಾರವನ್ನು ನಾನೂ ಸಹ ಕಣ್ಣಾರೆ ನೋಡಿದ್ದೇನೆ. ಆದರೆ ಸರ್ಕಾರದವರು ತಾವು ಕೊಡತಕ್ಕ ರಿಲೀಫು ಜಾಗ್ರತೆ ರೈತರಿಗೆ ದೊರೆಯುವ ಹಾಗೆ ಒಂದು ವ್ಯವಸ್ಥೆಮಾಡಬೇಕು. ಗ್ರಾಮಗಳು ಮುಳುಗಡೆಯಾಗಿರತಕ್ಕ ಜನರಿಗೆ ಬೇಗ ಜಾಗ ದೊರಕಿನಬೇಕು. ಈ ಪ್ರವಾಹದ ಹಾವಳಿಯನ್ನು ತಡೆಗಟ್ಟಲು ಸರ್ಕಾರದವರು ಅನೇಕ ಆಲೋಚನೆಗಳನ್ನು ಮಾಡುತ್ತಲೇ ಇದ್ದಾರೆ. ಆದರೆ ಇದುವರೆಗೂ ಅವರು ಯಾವ ಕಾರ್ಯಕ್ರಮವನ್ನೂ ಈ ಬಗ್ಗೆ ಕೈಗೊಂಡಿರುವಂತೆ ಕಂಡು ಬರುತ್ತಿಲ್ಲ. ಈಗ ನಮ್ಮಲ್ಲಿನ್ನು ನಡೆಯಬೇಕಾಗಿರತಕ್ಕ ಪ್ರಾಜೆಕ್ಟ್ ಕೆಲಸಗಳು ಅನೇಕವಾಗಿರುತ್ತವೆ. ಆ ಪ್ರಾಜೆಕ್ಟುಗಳನ್ನು ಬೇಗ ಮಂಜೂರು ಮಾಡಿ ಕೆಲಸವನ್ನು ಕೈಗೊಂದರೆ ಈ ಫ್ಲಡ್ ಹಾವಳಿಯನ್ನು ಕಂಟ್ರೋಲ್ ಮಾಡಲು ಸಹಾಯಕವಾಗುತ್ತದೆ. ಆದುದರಿಂದ ಈ ಪ್ರಾಜೆಕ್ಟ್ಗಳ ಕೆಲಸವನ್ನು ಬೇಗ ಕೈಕೊಳ್ಳಲು ಅವನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

ತಲಕಾಡಿನ ಹತ್ತಿರ ಸುಮಾರು ಸಾವಿರ ಎಕರೆ ಭೂಮಿಗೆ ನಷ್ಟವುಂಟಾಗಿದೆ. ಸಾವಿರಾರು ಎಕರೆ ಭೂಮಿಗೆ ಈ ರೀತಿ ಅನಾಹುತವಾಗುವದನ್ನು ತಡೆಗಟ್ಟಬಹುದು. ಸರಕಾರ ಅದಕ್ಕೆ ತಕ್ಕ ವ್ಯವಸ್ಥೆ ಮಾಡಿ ಫ್ಲಡ್ ಕಂಟ್ರೋಲ್ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇದಕ್ಕೆ ಒಂದು ಖಾಯಂ ವ್ಯವಸ್ಥೆ ಮಾಡಬೇಕು. ತೊಂದರೆಗೊಳಗಾದ ಜನರಿಗೆ ಸ್ಟೇಟ್ ಕೊಡುವ ವಿಚಾರದಲ್ಲಿ ಸರಕಾರಕ್ಕೆ ಒಂದು ಮನವಿ ಮಾಡಿಕೊಳ್ಳುತ್ತೇನೆ. ಈಗ ಸರಕಾರದವರು ಜಮೀನನ್ನು ವಶಪಡಿಸಿಕೊಳ್ಳುವುದನ್ನು ನಿಲ್ಲಿಸಿ ಆ ಭೂಮಿಯನ್ನು ಅವರಿಗೇನೇ ಕೊಟ್ಟು ಬಿಡಬೇಕೆಂದು ಕೇಳಿಕೊಳ್ಳುತ್ತೇನೆ. ಕಷ್ಟ ಅನುಭವಿಸಿದವರು ಹೊರ ಗಡೆಗೆ ಹೋಗಬಹುದು ಆದರೆ ಪ್ರವಾಹ ತೊಂದರೆಗೆ ಈಡಾದ ಬಡವರು ಯಾರು ಕೈತೋಟ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರೋ ಅಂಥವರ ಜಾಗ ವಶ ಪಡಿಸಿಕೊಳ್ಳದೆ ಅವರಿಗೆ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. 1953ರಲ್ಲಿ ಇದೇ ರೀತಿಯಾಗಿ ಪ್ರವಾಹ ಬಂದಿತ್ತು, ಪ್ರವಾಹ ಬಂದಾಗ್ಗೆ, ಟೀ.ನರಸೀಪುರ ಸಂಗಮದ ಹತ್ತಿರ ಎಲ್ಲ ಕಡೆಯಿಂದಲೂ ಸಂಚಾರ ಸೌಕರ್ಯ ನಿಂತು ಹೋಗುತ್ತದೆ ಎಂಟು-ಹತ್ತು ದಿವಸ ಸಂಚಾರ ಸೌಕರ್ಯ ನಿಲ್ಲುತ್ತದೆ ಇದರಿಂದ ಜನರಿಗೆ ಬಹಳ ತೊಂದರೆಯಾಗುತ್ತದೆ. ಈ ತೊಂದರೆ ತಪ್ಪಿಸುವುದಕ್ಕೆ ರಸ್ತೆಯ ಎತ್ತರ ಹೆಚ್ಚಿಸಬೇಕೆಂದು 1953ರಲ್ಲಿ ಎಸ್ಟಿಮೇಟು ಆಗಿದ್ದರೂ ಕೂಡ ಇನ್ನೂ ವರೆಗೆ ಈ ಕೆಲಸ ಜಾರಿಯಾಗಿಲ್ಲ, ಇದಕ್ಕೆ ಶೀಘ್ರದಲ್ಲಿಯೇ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಮತ್ತು ಸಂಚಾರ ಸೌಕರ್ಯಕ್ಕೆ ತೊಂದರೆ ಯಾಗದ ರೀತಿಯಲ್ಲಿ ಅನುಕೂಲ ಮಾಡಿಕೊಡುವುದು ಅಗತ್ಯವಾಗಿದೆ. ಪ್ರವಾಹ ಬಂದಾಗ್ಗೆ ಟೀ. ನರಸೀಪುರಕ್ಕೆ ಬರಬೇಕಾದರೆ ಚಾಮರಾಜ ನಗರಕ್ಕೆ ಹೋಗಿ ಅಧಿಕಾರಿಗಳು ಖಾನಗೀ ಜನರು ಬರಬೇಕಾಗುತ್ತದೆ. ಆದುದರಿಂದ ಈ ರಸ್ತೆ ಎತ್ತರದ ಮಟ್ಟವನ್ನು ಹೆಚ್ಚಿಸುವ ಕೆಲಸವನ್ನು ಶೀಘ್ರದಲ್ಲಿಯೇ ಮಂಜೂರು ಮಾಡಿ ಕಾರ್ಯಗತ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ. ಪ್ರವಾಹ ಬಂದಮೇಲೆ ಅನೇಕ ಸಣ್ಣ ಬಾವಿಗಳು ಕೊಚ್ಚಿ ಹೋಗಿವೆ. ಕಾನೂನಿನ ಪ್ರಕಾರ ರೈತರೇ ಅವುಗಳ ರಿಪೇರಿ ಮಾಡಬೇಕು. ಆದರೆ ಆ ಪ್ರಕಾರ ಮಾಡಲು ರೈತರಿಗೆ ಕಷ್ಟವಾಗುತ್ತದೆ

(ಶ್ರೀ ಟಿ. ಪಿ. ಬೋರಯ್ಯ)

ರೈತರಿಗೆ ಸಾಧ್ಯವಿಲ್ಲ, ಅವುಗಳ ರಿಪೇರಿ ಕೆಲಸವಾಗದೇ ಸೋದರೆ ಸರಿಯಾಗಿ ಬೆಳೆ ಸಿಕ್ಕುವುದಿಲ್ಲ. ಅದರಿಂದ ದೇಶದ ಸಂಪತ್ತು ಹೋಗುತ್ತದೆ. ಆದುದರಿಂದ ಸರಕಾರ ಈ ಕೆಲಸದ ಕಡೆಗೆ ಗಮನ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇವೆ. ಇದಕ್ಕೆ ಸಹಾನುಭೂತಿಯಿಂದ ಸಹಾಯ ಒದಗಿಸಿಕೊಡಬೇಕು. ಆಮೇಲೆ ರೈತರಿಗೆ ರಸಾಯನಿಕ ಗೊಬ್ಬರ ಒದಗಿಸಿಕೊಡುವ ಬಗ್ಗೆ ಅನೇಕ ಸ್ನೇಹಿತರು ಈಗಾಗಲೆ ಹೇಳಿದ್ದಾರೆ. ಗೊಬ್ಬರ ದೊರೆಯುವುದು ಕಷ್ಟವಾಗಿದೆ, ಅದರಲ್ಲಿಯೂ ಪ್ರವಾಹದಿಂದ ಭೂಮಿ ಬರಡು ಆಗಿದೆ. ರಿಯಾಯಿತಿ ದರದಲ್ಲಿ ಸಾಲದ ರೂಪದಲ್ಲಿ ರಸಾಯನಿಕ ಗೊಬ್ಬರವನ್ನು ರೈತರಿಗೆ ಒದಗಿಸಿಕೊಡಬೇಕೆಂದು ಈನಂದರ್ಭದಲ್ಲಿ ನಾನು ಸರಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಪ್ರವಾಹ ಪೀಡಿತ ಪ್ರದೇಶದಿಂದ ಬರತಕ್ಕ ಸದಸ್ಯರಿಗೆ ಮಾತನಾಡಲು ಅವಕಾಶ ಕೊಡಬೇಕೆಂದಿದ್ದೇನೆ.

ಶ್ರೀ ಬಿ. ಕೆ. ನಾಗೂರ್.—ನಾನು ಅಲ್ಲಿಂದಲೇ ಬಂದಿದ್ದೇನೆ. ನನಗೆ ಹತ್ತು ನಿಮಿಷ ಮಾತನಾಡಲು ಅವಕಾಶ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಟಿ. ಸೀತಾರಾಮು ರಾವ್.—ಸ್ವಾಮಿ, ಶಿವಮೊಗ್ಗ ಜಿಲ್ಲೆಯ ಸದಸ್ಯರಾದ ನನಗೆ ಮತ್ತು ಶ್ರೀ ಬದರೀನಾರಾಯಣ್ ಅವರಿಗೆ ಮಾತನಾಡಲು ಅವಕಾಶ ಕೊಡಬೇಕು, ನಾವು ನಿನ್ನೆಯ ದಿವಸ ಹೆಸರು ಕೊಟ್ಟಿದ್ದೇವೆ.

ಅಧ್ಯಕ್ಷರು.—ನಿಮ್ಮ ಹೆಸರು ಪಟ್ಟಿಯಲ್ಲಿಲ್ಲ.

ಶ್ರೀ ಡಿ. ಟಿ. ಸೀತಾರಾಮು ರಾವ್.—ಈಗ ನಮ್ಮಿಬ್ಬರ ಹೆಸರುಗಳನ್ನು ಪಟ್ಟಿಯಲ್ಲಿ ಸೇರಿಸಬಹುದು.

ಶ್ರೀ ಎನ್. ಜಿ. ನರಸಿಂಹೇಗೌಡ.—ಹಾಸನ ಜಿಲ್ಲೆಯ ಸದಸ್ಯನಾದ ನನಗೆ ಮಾತನಾಡಲು ಅವಕಾಶ ಕೊಡಲಿಕ್ಕೇಬೇಕು.

ಶ್ರೀ ಎ. ಜೆ. ಬೊಡ್ಡಮೇಟಿ.—ಧಾರವಾಡ ಜಿಲ್ಲೆಯಲ್ಲಿ 20ಸಾವಿರ ಜನರು ನಿರಾಶ್ರಿತರಾಗಿ ಕಷ್ಟಕ್ಕೀಡಾಗಿದ್ದಾರೆ. ನನಗೆ ಮಾತನಾಡಲು ಅವಕಾಶ ಕೊಡಬೇಕು.

ಅಧ್ಯಕ್ಷರು.—ಚರ್ಚೆಗೆ ಉತ್ತರ ಕೊಡಲು ಮಂತ್ರಿಗಳಿಗೆ ಅವಧಿ ಎಷ್ಟು ಬೇಕಾಗಬಹುದು ?

Sri KADIDAL MANJAPPA.—I require half an hour.

ಅಧ್ಯಕ್ಷರು.—ಈಗ ಶ್ರೀ ಬೊಮ್ಮೇಗೌಡರು ಮಾತನಾಡಲಿ.

Sri C. M. ARUMUGHAM.—Sir, you were pleased to say that chances would be given to members coming from the affected areas. May I bring to your notice that this is not a Representative Assembly and that everybody has got a right to speak ?

Mr. SPEAKER.—(Addressing Sri C. M. Arumugham). This is not a Representative Assembly—that everybody knows. How the Members make it a Representative Assembly while speaking, you know it and I also know it.

Let me see as to how many members could be accommodated ; but I cannot say that I will give a chance to everybody.

Sri S. D. KOTHAVALE.—Sir, my request to the Chair is that this debate may be taken up tomorrow also.

Dr. R. NAGAN GOWDA.—Sir, I support that suggestion. It is necessary that the representatives of almost all the districts that are affected should be heard in this House. If you do not have enough time today, you may kindly extend it by a few hours tomorrow.

Mr. SPEAKER.—It is for the House and the Government to decide and advise me in this respect.

Sri C. J. MUCKANNAPPA.—We stand by Sri S. D. Kothavale in this respect, Sir.

Sri KADIDAL MANJAPPA.—We have got still two hours. Let us think of it later. Let the debate go on.

Mr. SPEAKER.—Whether we are going to take it up tomorrw or not is a thing which has to be decided later. There is still time, I know. But I must know it within an hour whether it will be taken up tomorrow or not, because I have to fix up tomorrow's agenda.

Sri J. B. MALLARADHYA.—Sir, I understand that the House will meet tomorrow in the morning. Even if you are going to take up the business of the House as scheduled, the Prohibition Bill has to be taken up. Within four hours along with questions, there is no likelihood of the Prohibition Bill being completed tomorrow. On the other hand almost every representative from the districts wants to be heard on this subject of floods. I think the Hon'ble Revenue Minister may agree to the extension of time tomorrow also for this subject. You are not likely to finish the Prohibition Bill. And on the last day you can take up the Land Acquisition Bill because it will help you

in acquisition of lands and other things. It has already come from the Select Committee stage. I therefore request that tomorrow also we may have discussion on this flood situation so that the Government may have an opportunity of hearing all Members.

Sri KADIDAL MANJAPPA.—I leave it to the chair. I do not want to shut out discussion on an important matter like this. We thought originally that one day was sufficient. The Business Advisory Committee thought that one day was sufficient. I agreed yesterday to an extension of time by a day more. One thing must be remembered namely that the problem cannot be solved by discussion alone. I leave the matter to the Chair, Sir.

*ಶ್ರೀ ಜಿ. ಎಸ್. ಬೊಮ್ಮೇಗೌಡ (ಮಂಡ್ಯ).—ಸ್ವಾಮಿ, ನಾನು ಈ ಸಭೆಗೆ ಬಂದ ಮೇಲೆ ಇಂಥ ಒಂದು ಕಷ್ಟ ಪರಿಸ್ಥಿತಿಯನ್ನು ಚರ್ಚಿಸತಕ್ಕ ಅವಕಾಶ ನಮ್ಮ ಪಾಲಿಗೆ ಬಂದದ್ದು ನಮ್ಮ ದೌರ್ಭಾಗ್ಯ. ಶ್ರೀಮಾನ್ ಬೋರಯ್ಯನವರು ಮಾತನಾಡುತ್ತ ಈ ಸಲ ಪ್ರವಾಹಕ್ಕೆ ಆಗಸ್ತ್ಯೇಶ್ವರಸ್ವಾಮಿ ದೇವಸ್ಥಾನ ಸಿಕ್ಕಿ ಬಿದ್ದು ಹೋಯಿತು ಎಂದು ಹೇಳಿದರು. ಹಿಂದಿನ ಚರಿತ್ರೆಯನ್ನು ನೋಡಿದರೆ ನಮುದ್ರವನ್ನೇ ಆಪೋಶನ ತೆಗೆದುಕೊಂಡಂಥವರು ಅಗಸ್ತ್ಯರು. ಅಂಥವರೇ ಇಷ್ಟು ಕಷ್ಟಕ್ಕೆ ಈಡಾಗಿರಬೇಕಾದರೆ, ಸಾಮಾನ್ಯ ಜನರ ಪಾಡೇನಾಗಿದೆ ಎನ್ನುವುದನ್ನು ನಾವು ಹೇಳಬೇಕಾದ ಅಗತ್ಯವಿಲ್ಲ. ಈಗಾಗಲೇ ಮಾನ್ಯ ರೆವೆನ್ಯೂ ಮಂತ್ರಿಗಳು ತಮಗೆ ಸಿಕ್ಕಿರತಕ್ಕ ಅಂಕಿಅಂಶಗಳನ್ನು ನಮ್ಮ ಮುಂದೆ ಇಟ್ಟಿರುವುದರಲ್ಲಿ ಈ ವಿಷಯ ಅರ್ಥವಾಗುತ್ತದೆ. ಇದು ಕೇವಲ ಒಂದೆರಡು ದಿವಸಗಳಲ್ಲಿ ಪರಿಹರಿಸತಕ್ಕ ಕಲಸವಲ್ಲ. ನಮ್ಮ ಜಿಲ್ಲೆಯಲ್ಲಿ ಕೆಲವು ಕಡೆ ಆಗಿರುವ ಪರಿಸ್ಥಿತಿಯನ್ನು ನೋಡಿದರೆ ಇನ್ನು ನಾಲ್ಕಾರು ವರ್ಷಗಳಾದರೂ ಬೇಸಾಯಕ್ಕೆ ಯೋಗ್ಯವಾದ ರೀತಿಯಲ್ಲಿ ಆ ಜಮೀನನ್ನು ಮಾಡುವುದು ಕಷ್ಟವಾಗಿದೆ. ಮುಖ್ಯವಾಗಿ ಇಂಥಾ ಅನಾಹುತಗಳಾದ ಸಂದರ್ಭದಲ್ಲಿ ಸರ್ಕಾರ ಒಂದು ವಿಶೇಷ ಆಜ್ಞೆಯನ್ನು ಹೊರಡಿಸಿ ಸ್ಥಳದ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟು, ತಕ್ಷಣ ಎಷ್ಟರಮಟ್ಟಿಗೆ ಸಹಾಯ ಮಾಡುವುದು ಸಾಧ್ಯವೋ ಅದನ್ನು ಒದಗಿಸಲು ಅವಕಾಶವನ್ನು ಕಲ್ಪಿಸಿಕೊಡಬೇಕು. ಈಗ ಬೇಸಾಯದ ಕಾಲ. ಖುಷ್ಕಿ ಬೆಳೆಯಾಗಲೀ, ತರೀ ಬೆಳೆಯಾಗಲೀ, ಯಾವುದನ್ನು ಬೆಳೆಯಬೇಕಾದರೂ ಇದು ನಕಾಲ. ಈ ಕಾಲದಲ್ಲಿ ರೈತರಿಗೆ ತಮ್ಮ ಬೆಳೆ ಹೋದರೆ ಅದು ಕೇವಲ ಈ ದಿವಸದ ನಷ್ಟವಲ್ಲ, ಮುಂದೆ ತನ್ನ ಜೀವನವನ್ನು ಯಾವ ರೀತಿ ಸಾಗಿಸಬೇಕು ಎನ್ನುವ ದೊಡ್ಡ ಸಮಸ್ಯೆ ರೈತರಿಗೆ ಇದೆ. ಈ ಕಾಲದಲ್ಲಿ ಬಿಟ್ಟು ಬೇರೆ ಕಾಲದಲ್ಲಿ ಬೆಳೆಯನ್ನಿಟ್ಟರೆ ಉತ್ಕೃಷ್ಟವಾದ ಬೆಳೆ ಅವನ ಕೈ ಸೇರುವುದು ಕಷ್ಟ. ಕೆಲವು ಜಮೀನುಗಳಲ್ಲಿ ನಾಲ್ಕಾರು ವರ್ಷ ಬೇಸಾಯ ಮಾಡುವುದಕ್ಕೆ ಅವಕಾಶವಿಲ್ಲದ ಪರಿಸ್ಥಿತಿ ಇದೆ. ಆದುದರಿಂದ ಸರಕಾರದವರು ತಾವು ಒದಗಿಸತಕ್ಕ ಬೀಜದ ಬತ್ತ ಹಾಗೂ ಕೃತಕ ಗೊಬ್ಬರ ಇವುಗಳಲ್ಲಿ ಬೀಜದ ಬತ್ತವನ್ನು ಮುಫತ್ತಾಗಿ ಒದಗಿಸಿಕೊಟ್ಟು, ಕೃತಕಗೊಬ್ಬರ ಮತ್ತು ಜಮೀನು ಅಬಾದು ಮಾಡಬೇಕಾದರೆ ಕೊಡತಕ್ಕ ಮಧ್ಯವರ್ತಿ ಸಾಲವನ್ನು ಹತ್ತು ವರ್ಷಗಳ ಅವಧಿಯಲ್ಲಿ ತೀರಿಸುವಂತೆ ಅವಕಾಶ ಕಲ್ಪಿಸಿಕೊಟ್ಟು ಸಹಾಯ ಮಾಡಬೇಕು. ಈ ವರ್ಷ ಸಾಲವನ್ನು ಕೊಟ್ಟು ಮುಂದಿನ ವರ್ಷದಲ್ಲಿ ಅವನ್ನು ತೀರಿಸಬೇಕೆಂದರೆ ಕಷ್ಟ. ನಾಲ್ಕು ವರ್ಷಗಳಾದರೂ ಕೂಡ ಬೇಸಾಯ ಮಾಡುವುದಕ್ಕೆ ಅವಕಾಶವಿಲ್ಲದೆಯಿರುವಾಗ ಮುಂದಿನ ವರ್ಷದಲ್ಲಿಯೇ ಸಾಲವನ್ನು ತೀರಿಸಬೇಕು ಎಂದರೆ ಬಹಳ ಕಷ್ಟಕ್ಕೆ ಈಡಾಗುವ ಪರಿಸ್ಥಿತಿಯೊದಗುತ್ತದೆ. ಮಾನ್ಯ ಸಹಕಾರ ಸಚಿವರು ಸಹಕಾರ ಸಂಘಗಳ ಮೂಲಕ ಕಷ್ಟಕ್ಕೆ ಈಡಾಗಿರುವ ಪ್ರದೇಶದಲ್ಲಿರುವವರಿಗೆ ಮಧ್ಯವರ್ತಿ ಸಾಲದ ರೂಪದಲ್ಲಿ ಸಹಾಯವನ್ನೊದಗಿಸುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟು ಅದನ್ನು ವಾಪಸು ಮಾಡುವುದಕ್ಕೆ ಹೆಚ್ಚಿನ ಕಾಲಾವಕಾಶ ಕೊಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳಬೇಕಾಗಿದೆ. ಮಧ್ಯವರ್ತಿ ಸಾಲವನ್ನು ಕೊಟ್ಟು ಐದು ವರ್ಷಗಳಲ್ಲಿ ತೀರಿಸಬೇಕೆಂದರೆ, ಕೆಲವು ಸಂದರ್ಭಗಳಲ್ಲಿ ಹೊರಗಡೆಯಿಂದ ಮಣ್ಣನ್ನು ತಂದು ಜಮೀನನ್ನು ವ್ಯವಸಾಯಕ್ಕೆ ಯೋಗ್ಯವಾಗಿ ಮಾಡಿ ಬೆಳೆ ತೆಗೆಯಬೇಕಾದರೆ ಎರಡು ಮೂರು ವರ್ಷ ಬೇಕಾಗುತ್ತದೆ. ಹೀಗಿರುವಾಗ ಅವರಿಗೆ ಹತ್ತು ವರ್ಷ ಅವಧಿಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅನೇಕರು ಮನೆಮಠಗಳನ್ನು ಕಳೆದುಕೊಂಡಿದ್ದಾರೆ ಎನ್ನುವಂಥ ವರದಿ ನಮ್ಮ ಮುಂದೆ ಬಂದಿದೆ. ಅಂಥ ಜನರಿಗೆ Rural Housing Scheme ಮೂಲಕ ಮನೆಗಳನ್ನು ಒದಗಿಸುವುದಕ್ಕೆ ಮುಂದೆ ಬಂದು ಈ ಜನರಿಗೆ ಸಹಾಯ ಮಾಡುವ ದೃಷ್ಟಿಯಿಂದ ಅವರ ನಿಯಮಗಳನ್ನು ಸಡಿಲಗೊಳಿಸಿ, ಸಹಾಯ ಮಾಡಬೇಕು. ಮತ್ತು ಈ ರೀತಿ ಕೊಟ್ಟ ಸಾಲವನ್ನು 15-20 ವರ್ಷಗಳಲ್ಲಿ ತೀರಿಸುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟು ಪ್ರವಾಹಕ್ಕೆ ತುತ್ತಾಗಿರುವ ಮತ್ತು ಮನೆಮಠಗಳನ್ನು ಕಳೆದುಕೊಂಡಿರುವವರಿಗೆ ಸಹಾಯ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳಬೇಕಾಗಿದೆ.

ಮೊನ್ನೆ ತಾನೇ ಮಂಡ್ಯ ಜಿಲ್ಲೆಯ ವ್ಯವಸಾಯ ಸಂಘದಿಂದ ಸುಮಾರು 500 ರೂಪಾಯಿಗಳಷ್ಟು ಬೀಜದ ಬತ್ತವನ್ನು ಮುಫತ್ತಾಗಿ ಸಂಬಂಧಪಟ್ಟ ರೈತರಿಗೆ ಹಂಚಲು ಅವನರದ ಮಿಟಿಂಗ್ ಕರೆದು, ತಿರ್ಮಾನ ಮಾಡಿದ್ದಲ್ಲದೆ ಎಲ್ಲ ತಾಲ್ಲೂಕು ವ್ಯವಸಾಯ ಸಂಘಗಳೂ ಕೂಡ ಆದಷ್ಟು ಉದಾರವಾಗಿ ಸಹಾಯ ಮಾಡಬೇಕೆಂದು ಮನವಿಯನ್ನು ಸಹ ಕಳಿಸಿಕೊಟ್ಟಿದ್ದೇವೆ.

[MR. DEPUTY SPEAKER in the Chair.]

ಬೇಸಾಯಕ್ಕೆ ಯೋಗ್ಯವಾದ ಕಾಲದಲ್ಲಿ ಏನೇನು ಮಾಡುವುದಕ್ಕೆ ಸಾಧ್ಯವೋ ಅದನ್ನೆಲ್ಲಾ ಮಾಡಬೇಕು, ಎಂದರೆ ಇನ್ನೊಂದು ತಿಂಗಳೊಳಗೆ ಮಾಡಿಕೊಡಬೇಕು. ಯಾವ ಕಾಲದಲ್ಲಿ ಸಹಾಯ ಮಾಡಬೇಕೆಂದು ಹೊರಟಿದ್ದೀರೋ, ಅದೇ ಕಾಲದಲ್ಲಿ ಸಹಾಯದ ಪ್ರಯೋಜನ ದೊರೆಯಬೇಕೆಂಬುದನ್ನು ಸರ್ಕಾರ ಮನಗಾಣಬೇಕು. ಬೇಸಾಯಕ್ಕೆ ಯೋಗ್ಯವಾದ ಕಾಲದಲ್ಲಿ ಸಹಾಯ ದೊರೆಯದೆಹೋದರೆ, ನಿಮ್ಮ ಸಹಾಯ ನಿಷ್ಪ್ರಯೋಜನವಾಗಿ ಹೋಗುತ್ತದೆ. ಈ ಮಳೆ ಮುಗಿ

(ಶ್ರೀ ಜಿ. ಎಸ್. ಬೋಮ್ಮೇಗೌಡ)

ಯುವುದರೊಳಗೆ ರೈತರಿಗೆ ಏನೇನು ಸಹಾಯ ಮಾಡಬೇಕೆಂದಿದ್ದೀರೋ, ಅದನ್ನು ತೀವ್ರವಾಗಿ ಮಾಡಬೇಕು. ಈ ಸಂದರ್ಭವನ್ನು ದುರುಪಯೋಗಪಡಿಸಿಕೊಂಡು, ನೊಂದ ರೈತರಿಗೆ ನಲ್ಲಬೇಕಾದ ಸಹಾಯವನ್ನು ಯಾರೂ ತಮ್ಮ ಸ್ವಂತಕ್ಕೆ ಉಪಯೋಗಿಸಿಕೊಳ್ಳಕೂಡದು. ಯಾರಾದರೂ ಅಧಿಕಾರಿಗಳು ಈ ಪರಿಸ್ಥಿತಿಯಲ್ಲಿ ಅಧಿಕಾರ ದುರುಪಯೋಗಪಡಿಸಿಕೊಂಡು ತಪ್ಪು ಮಾಡಿದರೆ, ಕಠಿಣ ಶಿಕ್ಷೆಯನ್ನು ವಿಧಿಸರಾಗುತ್ತದೆಂಬ ಒಂದು ಆಜ್ಞೆಯನ್ನು ಹೊರಡಿಸಬೇಕು. ಆದಷ್ಟು ಜಾಗ್ರತೆ, ಈ ತಿಂಗಳೊಳಗೆ ನೊಂದವರಿಗೆ ನಹಾಯ ತಲಪುವಂತೆ ಮಾಡಲಿ ಎಂದು ಮತ್ತೊಂದು ಸಾರಿ ತಮ್ಮ ಮೂಲಕ ನರ್ಕಾರವನ್ನು ಪ್ರಾರ್ಥಿಸುತ್ತೇನೆ.

ಈ ಸಂದರ್ಭದಲ್ಲಿ ಅಲ್ಪ ಕಾಣಿಕೆಯಾಗಿ ನನ್ನ ಈ ಒಂದು ತಿಂಗಳ ಪಡಿತರವಾದ 250 ರೂಪಾಯಿಗಳನ್ನು ಪರಿಹಾರ ನಿಧಿಗೆ ಕೊಡುತ್ತೇನೆ.

ಇಷ್ಟು ಹೇಳಿ, ಈ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸುತ್ತೇನೆ.

*ಶ್ರೀ ಬಿ. ರಾಚಯ್ಯ. (ಚಾಮರಾಜನಗರ).— ಮಾನ್ಯ ಅಧ್ಯಕ್ಷರೇ, ಪ್ರಕೃತಿಯ ವಿಕೋಪಕ್ಕೆ ಒಳಗಾಗಿ., ಪ್ರವಾಹದ ಹಾವಳಿಯಿಂದ ನೊಂದ ಜನರಿಗೆ ಮೊದಲನೆಯದಾಗಿ ನನ್ನ ಅನುಕಂಪವನ್ನು ಸೂಚಿಸುತ್ತೇನೆ. ಪ್ರವಾಹದ ಹಾವಳಿಯಿಂದ ಜನರು, ಜಾನುವಾರುಗಳು, ಭೂಮಿ, ಸಾರ್ವಜನಿಕರಿಗೆ ಸೇರಿದಂಥ ಕಟ್ಟಡಗಳು, ರಸ್ತೆಗಳು, ಸೇತುವೆಗಳು ಮುಂತಾದವುಗಳಿಗೆಲ್ಲಾ ತೊಂದರೆ ಉಂಟಾಗಿದೆ. ಇದುವರೆಗೆ ನನ್ನ ಹಿಂದೆ ಮಾತನಾಡಿದ ಮಾನ್ಯ ಸದಸ್ಯರೆಲ್ಲರೂ ಕೂಡ ತಂತಮ್ಮ ಭಾಗಗಳಲ್ಲಿ ಎಷ್ಟರಮಟ್ಟಿಗೆ ಕೇಡಾಗಿದೆ ಎನ್ನುವುದನ್ನು ನರ್ಕಾರದ ಗಮನಕ್ಕೆ ತಂದಿದ್ದಾರೆ. ಅಲ್ಲದೇನೆ ನರ್ಕಾರದವರು ತಾತ್ಕಾಲಿಕವಾಗಿ ಏನೇನು ಪರಿಹಾರವನ್ನು ಒದಗಿಸಿದ್ದಾರೆ, ಮುಂದೆ ಏನು ಒದಗಿಸಬೇಕೆನ್ನುವ ವಿಷಯವನ್ನೂ ತಿಳಿಸಿದ್ದಾರೆ. ನನಗಾದರೂ ಮೈಸೂರು ಜಿಲ್ಲೆಯಲ್ಲಿ, ಟಿ. ನರಸೀಪುರ, ನಂಜನಗೂಡು ಮತ್ತು ಕೊಳ್ಳೇಗಾಲ ತಾಲ್ಲೂಕುಗಳಲ್ಲಿ ಪ್ರವಾಹಕ್ಕೆ ಒಳಗಾಗಿರತಕ್ಕಂಥ ಹಳ್ಳಿಗಳಲ್ಲಿ ನಡೆದಂಥ ದೃಶ್ಯವನ್ನು ನೋಡಿ ರೋಮಾಂಚನವಾಯಿತು. ಈ ಅನಾಹುತ ನಮ್ಮ ಕೈಯಲ್ಲಿಲ್ಲದ ವಿಷಯವಾಗಿರುತ್ತದೆ. ಆದರೆ ಈ ಒಂದು ಸಂದರ್ಭದಲ್ಲಿ ತತ್‌ಕ್ಷಣ ಏನು ಪರಿಹಾರವನ್ನು ಕೊಡಬೇಕೆಂದು ನರ್ಕಾರ ಆಜ್ಞೆ ಮಾಡಿದೆಯೋ, ಅದು ಜನಗಳಿಗೆ ದೊರಕದೆ ಇರತಕ್ಕಂಥಾದ್ದು ಒಂದು ವಿಷಾದವಾಗಿದೆ. ತಾವು 40 ರೂಪಾಯಿಗಳಿಂದ 100 ರೂಪಾಯಿಗಳವರೆಗೆ ತಾತ್ಕಾಲಿಕ ಪರಿಹಾರ ಕೊಡಬೇಕೆಂದು ಡೆಪ್ಯುಟಿ ಕಮಿಷನರಿಗೆ ಸೂಚನೆ ಕೊಟ್ಟಿದ್ದೀರಿ. ಆದರೆ ಬೊಕ್ಕನ ಹಳ್ಳಿ, ಹೊಸಕೋಟೆ ಮಳೆ, ಕರಾಬರ ಬಡಾವಣೆ ಮತ್ತು ನಂಜನಗೂಡಿನ ಕೆಲವು ಹಳ್ಳಿಗಳಲ್ಲಿ ಕೊಟ್ಟಿರುವ ಪರಿಹಾರವನ್ನು ನೋಡಿದರೆ, ಅದು ಬಹಳ ಕಡಮೆ. ಜನಗಳಿಗೆ ವಾನ ಮಾಡುವುದಕ್ಕೆ ಸ್ಥಾನವಿಲ್ಲ. ಅವರು ತಗ್ಗಿನ ಜಾಗು ಪ್ರದೇಶದಲ್ಲಿ ಜೀವಿನುತ್ತಿದ್ದಾರೆ. ಅಲ್ಲಿ ಸೊಳ್ಳೆಗಳ ಕಾಟ ಬೇರೆ. ಕೆಲವರಿಗೆ ಮಾತ್ರ ಸ್ಕೂಲುಗಳಲ್ಲಿ ಮತ್ತು ದೇವಸ್ಥಾನಗಳಲ್ಲಿ, ಅದೂ ಕೆಲವು ಭಾಗಗಳಲ್ಲಿ ವಾನಸ್ಥಾನ ಒದಗಿಸಿಕೊಟ್ಟಿದ್ದಾರೆ. ಆದರೆ ನಿಮ್ನವರ್ಗದ ಜನರಿಗೆ ಅಲ್ಲಿ ಕೂಡ ಸ್ಥಳವಿಲ್ಲ. ಅವರು ಕೇವಲ ಚಿಂಪೊರಿ ಪೆಡ್ಡುಗಳಲ್ಲಿ ಕಾಲಕಳೆಯುತ್ತಿದ್ದಾರೆ; ಆ ಪೆಡ್ಡುಗಳಿಗೆ ಒಂದೇ ಕಡೆ ಮೊಟ್ಟೆ ಕಟ್ಟಿದ್ದಾರೆ; ಇನ್ನೊಂದು ಕಡೆ ಇಲ್ಲವೇ ಇಲ್ಲ. ಇಂಥಾ ಚಿಂತಾಜನಕ ಪರಿಸ್ಥಿತಿಯಲ್ಲಿ ಅವರು ಜೀವನ ನಾಗಿಸಬೇಕು. ಸುಮಾರು 10 ದಿವನಕ್ಕೆ ಆಗತಕ್ಕಂಥ ಧಾನ್ಯಗಳನ್ನು ಅವರಿಗೆ ತಾತ್ಕಾಲಿಕವಾಗಿ ಕೊಡಿ ಎಂದು ನೂಚನೆ ಕೊಟ್ಟಿದ್ದಾರ್ಗೂ, ಕೆಲವು ನಂನಾರಾಗಳಿಗೆ 10 ರೂಪಾಯಿಗಳಷ್ಟು ಕೊಟ್ಟಿಲ್ಲ. ಈ ದೃಷ್ಟಿಯಿಂದ ಅವರು ಹೊಟ್ಟೆ ತುಂಬಿಕೊಳ್ಳುವುದಕ್ಕೂ ಕಷ್ಟವಾಗಿದೆ. ನರ್ಕಾರದವರು ಪರಿಹಾರ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರಿಗಳಿಗೆ ನೂಚನೆ ಕೊಟ್ಟಿದ್ದೇವೆಂದು ಹೇಳುತ್ತಾರೆ. ರೋಕೋಪಯೋಗಿ ಶಾಖೆಯ ಮಂತ್ರಿಗಳು, ಕೆಲವು ಯೋಜನೆಗಳನ್ನು ನಾಮಾನ್ಯ ಬಜೆಟ್ಟಿನಲ್ಲಿ ಒದಗಿಸಿರುವ ರೀತಿಯಲ್ಲಿ ಕೂಡಲೇ ತೆಗೆದುಕೊಳ್ಳಬೇಕೆಂದು, ನೂಚನೆ ಕೊಟ್ಟಿದ್ದೇವೆಂದು ಹೇಳಿದರು. ಆದರೆ ಕೆಲನ ಕಾರ್ಯಗಳನ್ನು ನಾನು ಹೇಳಿದ ಮೂರು ತಾಲ್ಲೂಕುಗಳಲ್ಲಿ ಎಲ್ಲಿಯೂ ತೆಗೆದುಕೊಂಡಿಲ್ಲ. ಕೆರೆಗಳನ್ನು ರಿಪೇರಿ ಮಾಡತಕ್ಕಂಥ, ಗ್ರಾಮ ರಸ್ತೆಗಳನ್ನು ರಿಪೇರಿ ಮಾಡತಕ್ಕಂಥ, ಅಣೆಕಟ್ಟುಗಳನ್ನು ಕಟ್ಟತಕ್ಕಂಥ ಮತ್ತು ಇನ್ನೂ ಕೆಲವು ಯೋಜನೆಗಳು ಮಂಜೂರಾಗಿದ್ದರೂ ಕೂಡ, ಅಧಿಕಾರಿಗಳು ಇನ್ನೂ ಮನನ್ನು ಮಾಡಿಲ್ಲ. ಆ ದೃಷ್ಟಿಯಿಂದ ನೋಡಿದರೆ, ಎಷ್ಟು ದಿವನ ಪುಕ್ಕಟೆ ಊಟ ಒದಗಿನುವುದಕ್ಕೆ ಸಾಧ್ಯ? ಇದು ಯಾವ ನರ್ಕಾರಕ್ಕೂ ಆಗುವುದಿಲ್ಲ. ಈ ಕಾರಣದಿಂದ ಕೆಲನ ಕಾರ್ಯಗಳನ್ನು ತೀವ್ರವಾಗಿ ತೆಗೆದುಕೊಂಡು ನೆರವೇರಿನಬೇಕೆಂದು ನರ್ಕಾರಕ್ಕೆ ನೂಚನೆಯನ್ನು ಕೊಡುತ್ತೇನೆ.

ಪುನರ್ವನತಿ ನಂಧರ್ಭದಲ್ಲಿ ಕೆಲವು ಜಿಲ್ಲೆಗಳಲ್ಲಿ ತಗ್ಗು ಪ್ರದೇಶಗಳಲ್ಲಿ ವಾನ ಮಾಡುತ್ತಿರುವ ಜನರನ್ನು, ಇನ್ನೊಂದು ಎತ್ತರವಾದ ಪ್ರದೇಶಕ್ಕೆ ಅದೇ ಊರಿನಲ್ಲಿ ಬೇರೆ ಕಡೆಯ ಬಡಾವಣೆಯಲ್ಲಿ ಜಾಗಕೊಟ್ಟು ಮನೆಕಟ್ಟಿಸಿಕೊಡುವುದು, ಮೊದಲನೆಯದು. ಎರಡನೆಯದು, ಒಂದೊಂದು ಊರೇ ಪೂರ್ತಿಯಾಗಿ ಹೋದಕಡೆ, ಬೇರೆಕಡೆ ಊರನ್ನು ಕಟ್ಟತಕ್ಕಂಥಾದ್ದು. ಒಂದನೆಯದಕ್ಕೂ ಎರಡನೆಯದಕ್ಕೂ ವ್ಯತ್ಯಾನ ತಿಳಿದುಕೊಳ್ಳಬೇಕು. ಒಂದು ಊರಿನಲ್ಲಿ ತಗ್ಗು ಪ್ರದೇಶದಲ್ಲಿರತಕ್ಕಂಥವರಿಗೆ ಎತ್ತರವಾದ ಪ್ರದೇಶಗಳಲ್ಲಿ ಬಡಾವಣೆ ಮಾಡುವ ನಂದರ್ಭದಲ್ಲಿ, ಅವರಿಗೆ ಜಾಗದ ಒಂದು ಅವಶ್ಯಕತೆ ಇದೆ, ಮತ್ತು ಅವರು ಮನೆಕಟ್ಟಿಕೊಳ್ಳುವುದಕ್ಕೆ ಹಣಕಾನಿನ ಮತ್ತು ಮರ ಮುಟ್ಟುಗಳ ನೌಲಭ್ಯ ಬೇಕು. ಅವರಿಗೆ ಇತರ ನಾರ್ವಜನಿಕ ನೌಲಭ್ಯಗಳೂ ದೊರೆಯಬೇಕು; ಎಂದರೆ ರನ್ತೆ, ಬೇಕಾಗಿರತಕ್ಕಂಥ ಪಾಠಶಾಲೆಗಳು, ಗ್ರಾಮಗಳಿಗೆ ಬೇಕಾಗಿರತಕ್ಕಂಥ ಇನ್ನಿತರೆ ನೌಲಭ್ಯಗಳು ಹೊನದಾಗಿ ನಿರ್ಮಾಣಮಾಡಿರತಕ್ಕಂಥ ಗ್ರಾಮಗಳಲ್ಲಿ ನಾರ್ವಜನಿಕ ಪಾಠಶಾಲೆಗಳು, ಆರೋಗ್ಯ ಕೇಂದ್ರುಗಳು, ದೇವನ್ಥಾನಗಳು, ರಸ್ತೆಗಳು ಮುಂತಾದುವುಗಳನ್ನು ನರ್ಕಾರದವರು ಮಾಡಿನಿಕೊಡಬೇಕು. ಊರಿನ ಒಂದು ಹೊನ ನಿರ್ಮಾಣಕ್ಕೆ ಏನು ಮಾಡಬೇಕೆಂಬುದು, 1911ನೆಯ ಇನವಿ, 1924ನೆಯ ಇನವಿ, ಮತ್ತು 1953ನೆಯ ಇನವಿಯಲ್ಲಿ ಮತ್ತು ಈಚೆಗೂ ಗೊತ್ತಾಗಿದೆ. 1953ನೆಯ ಇನವಿಯಲ್ಲಿ ಒಂದು ಫ್ಲಡ್ ರಿಲೀಫ್ ಕಮಿಟಿಯನ್ನು ಮೈನೂರು ಜಿಲ್ಲೆಯಲ್ಲಿ ಮಾಡಿತ್ತು, ಆ ನಮಿತಿ ಒಂದು ವರದಿಯನ್ನೂ ಕೊಟ್ಟಿದೆ. ಮೈನೂರು ಜಿಲ್ಲೆಯಲ್ಲಿ ಯಾವ ಪ್ರದೇಶಗಳು ಪ್ರವಾಹಕ್ಕೆ ತುತ್ತಾಗುತ್ತವೆಯೋ, ಅವುಗಳ

ಪುನರ್ವಸತಿ ನಿರ್ಮಾಣ ಮಾಡುವುದಕ್ಕೋಸ್ಕರ 7—7½ ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ತಯಾರು ಮಾಡಿದ್ದಾಗ್ಯೂ, ಸರ್ಕಾರ ಆ ವಿಷಯದಲ್ಲಿ ತಮ್ಮ ಗಮನವನ್ನು ಕೊಟ್ಟು ಏನು ಮಾಡಿದೆ? 1953ನೆಯ ಇಸವಿಯಲ್ಲಿ ಮುಖ್ಯ ಮಂತ್ರಿಗಳಾಗಿದ್ದ ಹನುಮಂತಯ್ಯನವರು, ಟಿ. ನರಸೀಪುರಕ್ಕೆ ಬಡಾವಣೆ ಗೋಸ್ಕರ 10 ಸಾವಿರ ರೂಪಾಯಿಗಳನ್ನು ಅನ್-ಡಿ-ಸ್ಕಾಟ್ ಮಂಜೂರು ಮಾಡಿದರು. ಹತ್ತು ವರ್ಷಗಳಾದರೂ, ಇನ್ನೂ ಮಾಡುವುದರಲ್ಲಿಯೇ ಇದ್ದಾರೆ, ಇದು ಜನರ ದುರದೃಷ್ಟವೋ ಅಥವಾ ನಮ್ಮ ಸರ್ಕಾರದ ಮಂದಗಾಮಿ ನೀತಿಯೋ ಎಂದು ಕೇಳದೆ ವಿಧಿಯಿಲ್ಲ. ಒಟ್ಟಿನಲ್ಲಿ ಎಲ್ಲ ಬಡವರಿದ್ದಾರೆ, ಎಲ್ಲ ಸ್ವಶಕ್ತಿಯಿಂದ ಮನೆಗಳನ್ನು ಕಟ್ಟಿಕೊಳ್ಳಲು ಸಾಧ್ಯ ಇಲ್ಲವೋ, ಆ ಜನಗಳಿಗೆ ಈ ಸಂದರ್ಭದಲ್ಲಿ ಪುನರ್ವಸತಿ ಮಾಡತಕ್ಕಂಥ ಕಾಲದಲ್ಲಿ ಅವರಿಗೆ 300 ರೂಪಾಯಿಗಳವರೆಗೆ ಸಹಾಯ ಮಾಡಬೇಕೆಂದು ತಮ್ಮ ಅರ್ಡರಿನಲ್ಲಿ ಪ್ರೊವಿಷ್ ಮಾಡಿದ್ದೀರಿ. ರಿಲೀಫ್ ಕೊಡುವಾಗ ಒಬ್ಬೊಬ್ಬರಿಗೂ ಎಷ್ಟು ನಷ್ಟವಾಗಿದೆ ಎಂಬುದನ್ನು ಗಮನಕ್ಕೆ ತೆಗೆದುಕೊಂಡು ಅದರ ಆಧಾರದ ಮೇಲೆ ಪರಿಹಾರ ಕೊಡಬೇಕೆಂದು ಮಾಡಿದ್ದೀರಿ. ನಷ್ಟ ನೂರು ರೂಪಾಯಿಗಳವರೆಗಿದ್ದರೆ, ಹತ್ತು ರೂಪಾಯಿಗಳ ಪರಿಹಾರ, 500ರವರೆಗಿದ್ದರೆ 25 ರೂಪಾಯಿಗಳ, ಸಾವಿರದ ಮೇಲಿದ್ದರೆ 40ರಿಂದ 100 ರೂಪಾಯಿಗಳವರೆಗೆ ಎಂಬುದಾಗಿ ಒಂದು ಗ್ರಡೇಷನ್ ಮೇಲೆ ಕ್ಯಾಷ್ ಗ್ರಾಂಟನ್ನು ಕೊಡಲು ಅಧಿಕಾರಿಗಳಿಗೆ ಅಧಿಕಾರ ಕೊಟ್ಟಿರುತ್ತೀರಿ. ಹೀಗೆ ಮಾಡಿರುವುದರಿಂದ ಅಧಿಕಾರಿಗಳು, ನಷ್ಟ ಎಷ್ಟು ಮಟ್ಟಿಗಾಗಿದ್ದರೂ, ತಮ್ಮ ಅಧಿಕಾರದ ಮಿತಿಯಲ್ಲಿಯೇ ನಷ್ಟದ ಅಂದಾಜನ್ನು ತಯಾರು ಮಾಡಬಹುದು. ಇದರಿಂದ ಬಡ ಜನಗಳಿಗೆ ಏನೊಂದು ಪರಿಹಾರವನ್ನು ಕೊಡಬೇಕೆಂದು ಸರ್ಕಾರದವರು ಇದ್ದಾರೆಯೋ, ಆ ಪರಿಹಾರ ಸಿಕ್ಕುವುದಿಲ್ಲ.

ಶ್ರೀಮಂತರಿಗೆ ಹೆಚ್ಚಿನ ಪರಿಹಾರ ಸಿಕ್ಕಿದ್ದರೂ ಬಡವರಾದವರಿಗೆ ಪರಿಹಾರವನ್ನು ಕೊಡಬೇಕಾದುದು ಅತ್ಯಾವಶ್ಯಕ. ಅವರಿಗೆ ಪರಿಹಾರವನ್ನು ಕೊಡುವ ಅಂದಾಜಿನ ಮೇಲೆ, 25, 50, 100 ಹಾಗೂ 300 ರೂಪಾಯಿಗಳೊಳಗಡೆ ಕೊಡಬೇಕೆಂದು ಈ ಸಂದರ್ಭದಲ್ಲಿ ತಿಳಿಸಿದ್ದಾರೆ. ಈ ರೀತಿಯಾದ ಪರಿಹಾರವನ್ನು ಕೊಡುವುದರಿಂದ ಪೂರ್ಣವಾಗಿ ಅವರು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಆಗುವುದಿಲ್ಲ. ಬಡವರಾದವರು ಎಂದರೆ ಸಾಧಾರಣವಾಗಿ ಪರಿವಾರದವರು, ನಾಯಕ ಪಂಗಡದ ಜನರು ಮತ್ತು ಕುರುಬರು ಬಹಳವಾದ ತೊಂದರೆಗೆ ಈಡಾಗಿದ್ದಾರೆ. ಹಿಂದೆ ನಿಮ್ನ ವರ್ಗದವರಿಗೆ ಸಹಾಯ ಮಾಡಬೇಕೆಂದು ಸರಕಾರದವರು ಅವರಿಗೆ ಮನೆಗಳನ್ನು ಕಟ್ಟಿಕೊಳ್ಳಲು 400 ರೂಪಾಯಿಗಳಷ್ಟು ಕೊಡಬೇಕೆಂದು ಯೋಚನೆಮಾಡಿದ್ದರು. ಅದರೆ ಈ ವರ್ಷ ಸರಕಾರದಿಂದ ಈ ಬಗ್ಗೆ ಯಾವ ಒಂದು ಯೋಜನೆಯೂ ಇನ್ನೂ ತಯಾರಾಗಿಲ್ಲ. ಅದರ ವಿಷಯ ಏನೇ ಇರಲಿ, ಈಗ ಸರಕಾರದವರು ಏನು ಒಂದು ಪರಿಹಾರವನ್ನು ಕೊಡಬೇಕೆಂದು ಯೋಚಿಸಿದ್ದಾರೋ, ಅದರಂತೆ ಎಲ್ಲೆಲ್ಲಿ ಬಂಜರು ಭೂಮಿಗಳಿರುತ್ತವೆಯೋ ಅಂತಹ ಕಡೆಗಳಲ್ಲಿ ಕಾಲೊನಿಗಳನ್ನು ಮಾಡಿ ಈ ಜನರಿಗೆ ವಸತಿಮಾಡಿಕೊಡಬೇಕು. ಅಗ್ರಿ ಕಲ್ಚರ್ ಕಾಲೊನಿಗಳನ್ನು ಮಾಡಿ ಯಾರು ಅಲ್ಲಿಯೇ ನೆಲಸಲು ಇಷ್ಟ ಪಡುತ್ತಾರೋ ಅಂತಹ ಜನಕ್ಕೆ ಸಹಾಯ ಮಾಡಬೇಕೆಂದಿರುವುದನ್ನು ಈ ಸಂದರ್ಭದಲ್ಲಿ ಉಪಯೋಗಿಸಿಕೊಂಡು ಈ ನಿರಾಶ್ರಿತ ಜನಕ್ಕೆ ಸಹಾಯ ಮಾಡುವುದು ಸಮಯೋಚಿತವಾದುದು. ಇದರಿಂದ ಅವರ ಜೀವನೋಪಾಯಕ್ಕೆ ಕೊಡ ಅನುಕೂಲವಾಗುತ್ತದೆ. ಈ ರೀತಿ ಎಲ್ಲೆಲ್ಲ ಅನಾವಶ್ಯಕವಾದ ಫಾರೆಸ್ಟ್ ಲ್ಯಾಂಡ್ಸ್‌ಗಳಿವೆಯೋ ಅದರಲ್ಲೂ ಕೊಳ್ಳೇಗಾಲದ ತಾಲ್ಲೂಕಿನಲ್ಲಿ ಹೆಚ್ಚಾಗಿದೆ ಎಂದು ಕೇಳಿಬ್ಬತ್ತೇನೇ—ಅಲ್ಲಿ ಇಂತಹ ರಿಲೀಫ್ ವರ್ಕುಗಳನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಆದರೆ ಬೆಳೆಗಳು ಹಾಳಾಗಿರತಕ್ಕ ಮತ್ತು ಜಮೀನಿಗೆ ತೊಂದರೆಯುಂಟಾಗಿರತಕ್ಕ ಭಾಗಗಳಿಗೆ ಸರಕಾರದವರು ನಾಲೆಗಳನ್ನು ತೋಡಿಸಿ ನೀರನ್ನು ಕೊಡಿಸುವುದಕ್ಕಾಗುವುದಿಲ್ಲ. ಇವೆಲ್ಲವನ್ನು ರಿಪೇರಿ ಮಾಡಿಕೊಳ್ಳುವ ಜವಾಬ್ದಾರಿ ರೈತರ ಮೇಲೆಯೇ ಬೀಳುತ್ತದೆ. ಈಗಿರುವ ಸ್ಥಿತಿಯಲ್ಲಿ ಸಾಲವನ್ನು ಪಡೆದುಕೊಂಡು ಈ ಜಮೀನುಗಳನ್ನು ರಿಪೇರಿ ಮಾಡಿಕೊಳ್ಳುವ ಸ್ಥಿತಿಯಲ್ಲಿ ಅವರಿಲ್ಲ. ಕೊಂಡನ ಕೊಪ್ಪಲು, ತಲಕಾಡಿನ ಹತ್ತಿರವಿರುವ ಒಂದು ಹಳ್ಳಿಯಲ್ಲಿ, ಕುಕ್ಕೂರು, ಹೊನತೊರೆ, ಎಡಕುರ, ಈ ಭಾಗಗಳಲ್ಲಿ ಇರುವ ಭೂಮಿಗಳಲ್ಲಿ ಮರಳು ತುಂಬಿಹೋಗಿಬಿಟ್ಟಿದೆ. ಈ ರೀತಿಯಾಗಿ ಹೆಚ್ಚಿನ ಹಳ್ಳಿಗಳಲ್ಲೇನೂ ಆಗಿಲ್ಲ. ಕೆಲವು ಹಳ್ಳಿಗಳಲ್ಲಿ ಇಂತಹ ಪರಿಸ್ಥಿತಿ ಇದೆ. ಸರಕಾರದವರು ಈ ಭೂಮಿಯನ್ನು ಉತ್ತಮವಾದ ಪರಿಸ್ಥಿತಿಗೆ ತರಲು ಸರಕಾರದಲ್ಲಿ ಬುಲ್‌ಡೋಜರುಗಳಿವೆ, ಟ್ರಾಕ್ಟರುಗಳಿವೆ. ಇವನ್ನು ಉಪಯೋಗಿಸುವುದರಿಂದ ಒಂದೆರಡು ತಿಂಗಳಿನಲ್ಲಿ ಮರಳನ್ನು ತೆಗೆದು ಈ ಭೂಮಿಯನ್ನು ಉತ್ತಮ ಸ್ಥಿತಿಗೆ ತರಲು ಅವಕಾಶವಾಗುತ್ತದೆ. ಮತ್ತು ಇಲ್ಲಿನ ಜನಗಳಿಗೂ ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ನೂಚಿಸುತ್ತೇನೆ.

ಮನೆಯನ್ನು ಕಟ್ಟುವ ವಿಚಾರದಲ್ಲಿ 300 ರೂಪಾಯಿಗಳಷ್ಟು ಕೊಡಬೇಕೆಂದು ಹೇಳಿದ್ದಾರೆ. ಆದರೆ ಈ ಮುನ್ನೂರು ರೂಪಾಯಿಗಳಷ್ಟು ಬೆಲೆ ಬಾಳುವ ಮರ, ಬೊಂಬುಗಳು ಯಾವ ಕಡೆಯಲ್ಲಿ ಜನ ಕಟ್ಟಿಕೊಳ್ಳಬೇಕೋ ಅವರಿಗೆ ಸುಲಭವಾಗಿ ಸಿಕ್ಕುವಂತಿರಬೇಕು. ಆದುದರಿಂದ ಈ ಮರದ ಸಾಮಾನುಗಳನ್ನು ಆಯಾ ತಾಲ್ಲೂಕಿನ ಹೆಡ್ ಕ್ವಾರ್ಟರುಗಳಲ್ಲಿ ಶೇಖರಿಸಿ ಹಂಚುವ ವ್ಯವಸ್ಥೆ ಮಾಡುವುದು ಸೂಕ್ತವಾಗಿರುತ್ತದೆ. ಕಾಳುಗಳನ್ನು ಹಂಚುವುದು ಮತ್ತು ತಕಾವಿ ಸಾಲಗಳನ್ನು ಕೊಡುವ ಸಂದರ್ಭದಲ್ಲಿ ಪ್ರತಿಯೊಬ್ಬರಿಗೂ encumbrance ಇಲ್ಲದಂತೆ ರೈತರು ಕೊಡಬೇಕೆಂದು ಹೇಳಿದ್ದಾರೆ. 2,000 ರೂಪಾಯಿಗಳಷ್ಟು ಬೆಲೆ ಬಾಳುವ ಜಮೀನಿದ್ದರೆ 200 ರೂಪಾಯಿಗಳಷ್ಟು ಸಾಲ ಎಂದು ಕೊಡುತ್ತಾರೆ. ಆದರೆ ಪುನಃ ಸಾಲ ಬೇಕಾದರೆ ಮೊದಲಿನ ಸಾಲ ಪೂರ್ತಿ ತೀರಿರಬೇಕು. ಆದರೆ ಭೂಮಿಯು 1500 ರೂಪಾಯಿಗಳಷ್ಟು ಬೆಲೆ ಬಾಳುವಂತಿದ್ದರೆ ಇದರ ಶೇಕಡಾ 75ರಷ್ಟು ಸಾಲವನ್ನು ಕೊಡಬಹುದು ಎನ್ನುವ ವ್ಯವಸ್ಥೆ ಮಾಡಿದರೆ ಈ ಸಾಲವನ್ನು ಕೊಡುವುದರಿಂದ ಉಪಯೋಗವಾಗುತ್ತದೆ. ಈ ರೀತಿಯಾಗಿ ಶೇಕಡಾ 75ರಷ್ಟು ಬೆಲೆಯನ್ನು ಸರಕಾರ ಕೊಡಲು ಮನಸ್ಸು ಮಾಡಬೇಕೆಂದು ನೂಚಿಸುತ್ತೇನೆ. ಈ ಎಲ್ಲ ಅನುಕೂಲಗಳನ್ನು ಮಾಡಿಕೊಡಲು ಅಂದಾಜುಗಳನ್ನು ತಯಾರು ಮಾಡುವಾಗ ಅಧಿಕಾರಿಗಳು ಬಹಳ ಕಡಮೆಯಾದ ಎಸ್ಟಿಮೇಟುಗಳನ್ನು ಮಾಡುತ್ತಾರೆ. ಇದು ಸರಿಯಾಗಿರುವುದಿಲ್ಲ. ಪ್ರವಾಹದಿಂದ ಎಷ್ಟು ನಷ್ಟವಾಗಿದೆ, ಎಷ್ಟು ಜನಕ್ಕೆ ತೊಂದರೆಯಾಗಿದೆ, ಮತ್ತು ಕಷ್ಟಗಳಾಗಿವೆ ಎನ್ನುವುದನ್ನು ಪೂರ್ಣವಾಗಿ ಪರಿಶೀಲಿಸಿ ಅಖ್ಯರಾದ, ಸ್ವಲ್ಪ ಮಟ್ಟಿಗೆ

(ಶ್ರೀ ಬಿ. ರಾಚಯ್ಯ)

approximate ಆದಂತಹ ಒಂದು ಪಟ್ಟಿಯನ್ನು ತಯಾರಿಸಿ ಇಂಡಿಯಾ ಸರಕಾರದಿಂದ ಶೀಘ್ರವಾಗಿ ನೆರವನ್ನು ಪಡೆಯಬೇಕು; ಹೀಗೆ ಮಾಡದೆ ಹೋದರೆ ಈ ಕಾರ್ಯವನ್ನು ಯಶಸ್ವಿಯಾಗಿ ಪೂರ್ತಿ ಮಾಡುವುದಕ್ಕಾಗುವುದಿಲ್ಲ. ಆದಕಾರಣ ಒಂದು ನಿಖರವಾದ ಅಂದಾಜನ್ನು ತಯಾರಿಸಿ, ನಮ್ಮ ವಿರೋಧ ಪಕ್ಷದ ನಾಯಕರು ತಂದಿರುವ ತಿದ್ದುಪಡಿಯಲ್ಲಿ ಹೇಳಿರುವಂತೆ ನುಮಾರು ಹತ್ತು ಕೋಟಿಯಷ್ಟು ಪರಿಹಾರವನ್ನು ಈ ಬಡಜನರ ಪುನರ್ವ್ಯವಸ್ಥೆಗಾಗಿ ಪಡೆಯಲು ಯತ್ನಿಸಬೇಕು. ಅದಕ್ಕೊಸ್ಕರ ಇಂತಹ ಒಂದು ಮನವಿಯನ್ನು ತಯಾರಿಸಿ ತಿಳಿಸಬೇಕು ಎಂದು ಇಲ್ಲಿ ಹೇಳುತ್ತೇನೆ. Floods havocಗಳನ್ನು ತಪ್ಪಿಸಬೇಕು ಎಂದು ಏನೇನು ಯೋಜನೆಗಳನ್ನು ತಯಾರುಮಾಡಿದ್ದರೋ ಅವು, ಕಳೆದ ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಮತ್ತು ಈ ಮೂರನೆಯ ಯೋಜನೆಯಲ್ಲಿಯೂ ಯಾವುವೂ ಕಾರ್ಯಗತವಾಗಬೇಕೆಂದಿದ್ದುವೋ ಅವನ್ನು ಪೂರ್ತಿ ಮಾಡಬೇಕು. ಕೊಡಗಿನ ಹಾರಂಗಿ ಮತ್ತು ಕಂಬದಕಡ ಪ್ರಾಜೆಕ್ಟನ್ನು ಮಾಡಿ ಇವೊತ್ತಿನ ದಿನ ಈ ನೀರನ್ನು ಉಪಯೋಗಿಸಿಕೊಳ್ಳದಿದ್ದರೆ ಉಪಯೋಗವಾಗುವುದಿಲ್ಲ. ಬದರಳ್ಳಿ ಹತ್ತಿರ ಕಪಿನಿ ಪ್ರಾಜೆಕ್ಟು, ಸುವರ್ಣಾವತಿ ಪ್ರಾಜೆಕ್ಟು ಹಾಗೂ ಹೇಮಾವತಿ ಪ್ರಾಜೆಕ್ಟು ಇವನ್ನು ಪೂರೈಸಿದ್ದಿದ್ದರೆ ಜನಕ್ಕೆ ಇಷ್ಟು ತೊಂದರೆಯಾಗುತ್ತಿರಲಿಲ್ಲ. ಇದಕ್ಕೆ ಹಚ್ಚಿನ ಗಮನ ಕೊಡಬೇಕು, ಎಂದು ಮನವಿ ಮಾಡಿಕೊಂಡು ಈ ನನ್ನ ನಾಲ್ಕು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ವೈ. ವೀರಪ್ಪ (ಹೊಳೆನರಸಿಪುರ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಸದಸ್ಯರುಗಳು ಪ್ರಕೃತಿಯ ವೈಪರೀತ್ಯ ಹಾಗೂ ವಿಕೋಪಕ್ಕೆ ಒಳಗಾಗಿರತಕ್ಕ ಪರಿಸ್ಥಿತಿಯನ್ನು ಕೂಲಂಕಷವಾಗಿ ಈ ಸಭೆಯ ಮುಂದೆ ಇಟ್ಟಿದ್ದಾರೆ. ನಾನು ಯಾವ ರೀತಿಯಾಗಿ ಈ ಪರಿಸ್ಥಿತಿಗೆ ಒಳಗಾಗಿರತಕ್ಕ ಜನಗಳಿಗೆ ಪರಿಹಾರವನ್ನು ಕೊಡಬೇಕು ಎಂಬ ಅಂಶಗಳನ್ನು ಸೂಚನೆ ಮಾಡುವುದಕ್ಕೆ ಮುಂಚೆ ಒಂದೆರಡು ಮಾತುಗಳನ್ನು ಈ ಸಭೆಯ ಮುಂದೆ ಇಡಬೇಕೆಂದು ಬಯಸುತ್ತೇನೆ. ಏತಕ್ಕೆಂದರೆ, ಜನಜೀವನದಲ್ಲಿ ವ್ಯಕ್ತಿಯ ವ್ಯವಹಾರವಾಗಲೀ, ಸಾಮಾಜಿಕ ವ್ಯವಹಾರವಾಗಲೀ, ಅಥವಾ ಸರಕಾರದ ವ್ಯವಹಾರವಾಗಲೀ ಅದನ್ನು ದೂರದೃಷ್ಟಿಯಿಂದ ನಾವು ಪರಿಶೀಲಿಸುವುದು ಬಹಳ ಉಚಿತ. ಇದು ಪಂಡಿತರ ಮತ್ತು ಅನುಭವಿಗಳ ಒಂದು ತತ್ವವಾಗಿದೆ. ಸರಕಾರ ಎಷ್ಟರಮಟ್ಟಿಗೆ ಮುಂದುವರಿಯುತ್ತಿದೆ, ಈ ಬಗ್ಗೆ ಯಾವ ರೀತಿಯಾದ ಕಾರ್ಯಕ್ರಮವನ್ನು ತೆಗೆದುಕೊಂಡಿದೆ ಎನ್ನುವುದನ್ನು ನೋಡಿದರೆ ನಿಜವಾಗಿಯೂ ಚಿಂತಾಜನಕವಾಗಿದೆ. ಪ್ರಕೃತಿಯ ವೈಪರೀತ್ಯದಿಂದ, ಅತಿವೃಷ್ಟಿ, ಅನಾವೃಷ್ಟಿ ಮತ್ತು ಕ್ಷಾಮಡಾಮರಗಳು ಆಗಾಗ್ಗೆ ಬರುತ್ತಿರುತ್ತವೆ. ಸರಕಾರ ಜನತೆಯ ಒಂದು ಗುರುತರವಾದ ಜವಾಬ್ದಾರಿಯನ್ನು ಹೊತ್ತಿರುವುದರಿಂದ ಎಷ್ಟರಮಟ್ಟಿಗೆ ಮುಂಜಾಗರೂಕತೆ ವಹಿಸಿ ಈ ಬಗ್ಗೆ ತಡೆಗಟ್ಟುವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಗಿತ್ತೋ ಅಂತಹ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ ಎಂದು ನಾನು ಹೇಳಬೇಕಾಗಿದೆ. ನಮ್ಮ ವಿರೋಧ ಪಕ್ಷದ ನಾಯಕರು ನಿನ್ನೆಯ ದಿವಸ ಮಾತನಾಡುವಾಗ ಹೇಳಿದಂತೆ Preventive Measures ಏನೇನನ್ನು ತೆಗೆದುಕೊಂಡಿದ್ದೀರಿ ಎಂದು ಪ್ರಶ್ನೆ ಮಾಡಿದಾಗ ಆ ಬಗ್ಗೆ ಸರಕಾರದವರೂ ಉತ್ತರ ಕೊಟ್ಟಿದ್ದಾರೆ. ಈ ಪ್ರವಾಹಗಳ ಉಬ್ಬರವನ್ನು ತಡೆಗಟ್ಟಬೇಕಾದರೆ ಅನೇಕ ದಾರಿಗಳಿವೆ.

ಈಗಿರತಕ್ಕಂಥ ನದಿಗಳ ನೀರನ್ನು ಯಾವ ರೀತಿ ಜನತೆಯ ಹಿತಕ್ಕಾಗಿ ನಾವು ಉಪಯೋಗಿಸಿಕೊಳ್ಳಬೇಕು ಎಂಬ ಬಗ್ಗೆ ವಿಚಾರಮಾಡಿ ನೋಡಿದರೆ ಸರಕಾರವು ನಿಜವಾಗಿಯೂ ತನ್ನ ಕರ್ತವ್ಯವನ್ನು ಮಾಡಲಿಲ್ಲವೆಂದು ನಾನು ಅನಿವಾರ್ಯವಾಗಿ ಈ ಸಂದರ್ಭದಲ್ಲಿ ಹೇಳಬೇಕಾಗಿದೆ. 1924-74ರ ವರೆಗೆ ಇರತಕ್ಕ ಅವಧಿಯಲ್ಲಿ ಮೈಸೂರು ದೇಶ ಎಷ್ಟು ನೀರನ್ನು ಕಾವೇರಿ ಬೇಸಿನ್ನಿನಿಂದ ಉಪಯೋಗಿಸಿಕೊಳ್ಳಬೇಕಾಗಿತ್ತೋ ಅಷ್ಟನ್ನೂ ಉಪಯೋಗಿಸಿಕೊಳ್ಳಲಿಲ್ಲ. ಅನೇಕ ಯೋಜನೆಗಳು ಈಗ ತಯಾರಾಗಿದ್ದರೂ ಸರ್ಕಾರ ನಿಜವಾಗಿ ದಿಟ್ಟತನವಾದ ಮತ್ತು ನಿರ್ದಿಷ್ಟವಾದ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ನೆರೆಯ ಪ್ರಾಂತದವರಾದ ಮದ್ರಾಸ್ ಮತ್ತು ಆಂಧ್ರ ಪ್ರದೇಶದವರ ಒಂದು ಕಾರ್ಯಕ್ರಮವನ್ನು ನೋಡಿದರೆ ಅಲ್ಲಿನ ಲೀಡರ್ಸ್ ಎಷ್ಟರಮಟ್ಟಿಗೆ ಮುಂದಾಳುತನದಿಂದ ನೂಕ್ತ ಕ್ರಮಗಳನ್ನು ಸಕಾಲದಲ್ಲಿ ತೆಗೆದುಕೊಂಡು ಇಂಡಿಯಾ ಸರ್ಕಾರದೊಡನೆ ಪತ್ರವ್ಯವಹಾರ ಮಾಡುತ್ತಿದ್ದಾರೆಂಬುದನ್ನು ನಾವು ಈ ಸಂದರ್ಭದಲ್ಲಿ ಯೋಚನೆಮಾಡಿ ನೋಡಬೇಕಾಗಿದೆ. ಆಂಧ್ರ ಪ್ರದೇಶದವರು ಕೃಷ್ಣಾ-ಗೋದಾವರಿ ನದಿಗಳ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುವ ಬಗ್ಗೆ ಎಷ್ಟರಮಟ್ಟಿನ ನಿರ್ದಿಷ್ಟವಾದ ತೀರ್ಮಾನಗಳನ್ನು ತೆಗೆದುಕೊಂಡಿದ್ದಾರೆ ಎಂಬುದನ್ನೂ ಸಹ ನಾವು ನೋಡಬೇಕು. ಆಂಧ್ರ ಪ್ರದೇಶದ ಮೇಲ್ಮನೆ ಮತ್ತು ಕೆಳಮನೆಗಳ ಜಂಟೀ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡಿದಾಗ ಆಂಧ್ರ ಪ್ರದೇಶದ ಗವರ್ನರ್ ಶ್ರೀ ಭೀಮಸೇನ ಸಾಚಾರ್ ಅವರು 1951ನೆಯ ಇಸವಿಯಲ್ಲಿ ಈ ಬಗ್ಗೆ ಆದ ಒಪ್ಪಂದವನ್ನು ನಂಬಂಧಪಟ್ಟ ರಾಜ್ಯಗಳು ಎಲ್ಲವೂ ಒಪ್ಪಿಕೊಳ್ಳಬೇಕು ಎಂದು ಸೂಚನೆ ಕೊಟ್ಟಿದ್ದಾರೆ. ಅದೂ ಅಲ್ಲದೆ ಎ.ಐ.ಸಿ.ಸಿ. ಅಧ್ಯಕ್ಷರಾದ ಶ್ರೀಮಾನ್ ಎನ್. ಸಂಜೀವ ರೆಡ್ಡಿಯವರು ತಮ್ಮ ಪ್ರತ್ಯೇಕ ಧೋರಣೆಯ ಮನೋಭಾವವನ್ನು ಸೂಚಿಸಿದ್ದಾರೆ. ಹೀಗಿರುವಾಗ ನಮ್ಮ ಸರ್ಕಾರದವರು ಇದುವರೆಗೂ ಯಾವ ರೀತಿಯಲ್ಲೂ ಅಂತಹ ದಿಟ್ಟತನದ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲವೆಂದು ನಾನು ಈ ಸಂದರ್ಭದಲ್ಲಿ ಬಹಳ ಸಂಕಟದಿಂದ ಹೇಳಬೇಕಾಗಿದೆ. ನಮ್ಮ ದೇಶದಲ್ಲಿ ಎಷ್ಟೋ ಪ್ರಾಜೆಕ್ಟುಗಳನ್ನು ನಿರ್ಮಾಣ ಮಾಡುವುದರಿಂದ ಎಷ್ಟರಮಟ್ಟಿಗೆ ಈ ಪ್ರವಾಹದ ಹಾವಳಿಯನ್ನು ತಡೆಗಟ್ಟಬಹುದು ಎಂಬುದಕ್ಕೆ ಕೆಲವಾರು ಅಂಶಗಳನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇಂತಹ ಪ್ರವಾಹ ಪೀಡಿತ ಸಂಭವಗಳು ಹಿಂದೆ ಎಷ್ಟೋ ಸಾರಿ ನಮ್ಮ ದೇಶದಲ್ಲಿ ಉದ್ಭವವಾಗಿದ್ದರೂ ಇದುವರೆಗೂ ಯಾವ ಶಾಶ್ವತ ಕ್ರಮವನ್ನು ಸರ್ಕಾರದವರು ತೆಗೆದುಕೊಂಡಿಲ್ಲ. ಒಂದು ವೇಳೆ ಆ ರೀತಿ ಜರೂರು ಕ್ರಮಗಳನ್ನು ತೆಗೆದುಕೊಂಡಿದ್ದರೂ ಅದು ಈ ವಿಶೇಷ ಸಂದರ್ಭದಲ್ಲಿ ಏನೇನೂ ಸಾಲದು. ಈ ಬಗ್ಗೆ ಅನೇಕ ತಿದ್ದುಪಡಿಗಳನ್ನು ನನ್ನ ಮಾನ್ಯ ಸ್ನೇಹಿತರು ಅನೇಕರು ತಂದಿದ್ದಾರೆ. ನಿಮ್ಮ ಪಕ್ಷದವರೂ ಸಹ ತಂದಿದ್ದಾರೆ. ಇದರಂತೆ ಒಬ್ಬರು 3 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಕೊಡಬೇಕೆಂದು ಕೇಳಿದರೆ ಅದು ಸಾಲದೆಂದು ಇನ್ನೊಬ್ಬರು 10 ಕೋಟಿ ರೂಪಾಯಿಗಳನ್ನು ಕೊಡಬೇಕು ಎಂದು ಹೇಳುತ್ತಾರೆ. ಬಡ್ಡೆಟ್ಟಿನ ಅಧಿವೇಶನ

ದಲ್ಲಿ ಈ ಬಗ್ಗೆ ನಾವು ಬಹಳ ಸೂಚನೆಗಳನ್ನು ಕೊಟ್ಟಿದ್ದರೂ ಅದನ್ನು ನೀವು ಬಹಳ ಲಘುವಾಗಿ ಪ್ರತಿಭಟಿಸಿದ್ದೀರಿ. ನಾವು ಎಷ್ಟು ನಿರೀಕ್ಷಿಸಿದ್ದೇವೋ ಅಷ್ಟನ್ನು ಇನ್ನೂ ಮುಟ್ಟಿಲ್ಲ. ಈ ರೀತಿಯಾದ ಘಟನೆಯಾಗಿ ಜನಗಳು ನಿರಾಶ್ರಿತರಾದರೆ ಅಂತಹ ಕಾಲದಲ್ಲಿ ಅವರಿಗೆ ಯಾವ ರೀತಿ ಹಣ ಸಹಾಯ ಮಾಡಬೇಕೆಂಬುದಕ್ಕೆ ಸಾಕಷ್ಟು ಹಣವನ್ನು ಬಡ್ಜೆಟ್ಟಿನಲ್ಲಿ ಮುಂಜೂರು ಮಾಡಿಲ್ಲ. ನಾವು ಆ ಕಾಲದಲ್ಲಿ ಮಾತನಾಡಿದ ಅಂಶಗಳನ್ನು ಸರ್ಕಾರದವರು ಬಹು ಲಘುವಾಗಿ ತೆಗೆದು ಕೊಂಡು ತೀರ್ಮಾನಗಳನ್ನು ಕೈಗೊಂಡಿದ್ದಾರೆ. ನಮ್ಮ ದೇಶ ಬಡ ದೇಶವಾಗದಿದ್ದರೆ, ನಮ್ಮಲ್ಲಿ ಸಾಕಷ್ಟು ಹಣ ಈ ಬಾಬಿಗೆ ಮುಂಜೂರಾಗಿದ್ದಿದ್ದರೆ ನಿಜವಾಗಿ ಬಹಳ ತ್ವರಿತವಾದ ರೀತಿಯಲ್ಲಿ ಜನಗಳಿಗೆ ಪರಿಹಾರವನ್ನು ಕೊಡಬಹುದಾಗಿತ್ತು. ಪ್ರವಾಹ ಪೀಡಿತರಾಗಿ ನೊಂದವರಿಗೆ ಹೆಚ್ಚಿನ ಸಹಾಯವನ್ನು ಬಹು ಜಾಗ್ರತೆಯಾಗಿ ಮಾಡಬಹುದಾಗಿತ್ತು. ಈಗ ನಮ್ಮ ಸ್ಥಿತಿ ಹಾಗೆ ಇಲ್ಲದೇ ಇರುವುದರಿಂದಲೇ ಕೇಂದ್ರ ಸರ್ಕಾರದ ಕಡೆ ಕೈ ಒಡ್ಡಬೇಕು; ಇಲ್ಲದಿದ್ದರೆ ನಮ್ಮನಿರಬೇಕು. ಇದರಿಂದಲೇ ಆ ಜನಗಳ ಸ್ಥಿತಿ ಈಗ ಚಿಂತಾಜನಕವಾಗಿದೆ. ಸರ್ಕಾರವೂ ತನ್ನ ಕರ್ತವ್ಯಪಾಲನೆಯಲ್ಲಿ ಲೋಪ ಮಾಡಿದೆ ಎಂದು ಈ ಸಂದರ್ಭದಲ್ಲಿ ನಾನು ಹೇಳಬೇಕಾಗಿದೆ. ಈ ಪರಿಸ್ಥಿತಿಯಲ್ಲಿ ಸರ್ಕಾರದವರು ಪ್ರವಾಹ ಪೀಡಿತವಾದ ಸಂದರ್ಭಗಳಲ್ಲಿ ಆತುರಾತುರವಾಗಿ ಸರ್ಕಾರದ ಆಜ್ಞೆಗಳನ್ನು ಹೊರಡಿಸಿ ಕೊನೆಯ ಪಕ್ಷ ಅಲ್ಪ ಪರಿಹಾರವನ್ನಾದರೂ ಕೂಡಲೇ ನೊಂದವರಿಗೆ ಕೊಡುವುದು ಸರ್ಕಾರದ ಆದ್ಯ ಕರ್ತವ್ಯ. ಇಂತಹ ಸಂದರ್ಭದಲ್ಲಿ ಸೂಕ್ತ ಕಾರ್ಯಕ್ರಮವನ್ನು ಸರ್ಕಾರದವರು ತೆಗೆದು ಕೊಳ್ಳದೇ ಇರುವುದನ್ನು ನೋಡಿದರೆ ಸರ್ಕಾರ ಎಷ್ಟು ಬೇಜವಾಬ್ದಾರಿಯಿಂದ ವರ್ತಿಸುತ್ತಿದೆ ಎಂದು ನಾನು ಅನಿವಾರ್ಯವಾಗಿ ಹೇಳಬೇಕಾಗಿದೆ.

ಇನ್ನು ಈಗ ಪ್ರವಾಹ ಪೀಡಿತರಾದವರಿಗೆ ಒದಗಿಸಿರುವ ಪರಿಹಾರದ ಬಗ್ಗೆ ನಾನು ಮಾತನಾಡಬೇಕಾಗಿದೆ. ಪರಿಹಾರ ಧನ ನೇರವಾಗಿ ಪ್ರವಾಹಪೀಡಿತ ಜನಗಳಿಗೆ ನಿಜವಾಗಿ ಹೋಗಿ ಸೇರಿದೆಯೇ ಎಂಬುದನ್ನು ನೋಡಿದರೆ ಅದು ಖಂಡಿತವಾಗಿ ಅವರಿಗೆ ಹೋಗಿ ಸೇರಿಲ್ಲ. ನನಗೆ ದೊರೆತಿರುವ ಅಂಕಿ ಅಂಶಗಳನ್ನು ಈ ಸಂದರ್ಭದಲ್ಲಿ ಉಪಯೋಗಿಸಿಕೊಂಡು ನಾನು ವಿಚಾರ ಮಾಡುತ್ತಿದ್ದೇನೆ. ನಿಜವಾಗಿ ಅವರಿಗೆ ಪರಿಹಾರ ತಲಪಿಲ್ಲ. The proof of the pudding is in the eating ಎಂಬ ಹಾಗೆ ಸರ್ಕಾರ ಕೇವಲ ಆಜ್ಞೆಗಳನ್ನು ಮಾಡಿದರೆ ಸಾಲದು. ಸರ್ಕಾರದವರೂ ತಮ್ಮ ಆಜ್ಞೆಗಳನ್ನೇ ತಾವೇ ಚಾಚೂ ತಪ್ಪದೆ ಅನುಸರಿಸಿ ಈಗ ಪ್ರವಾಹ ಪೀಡಿತರಾಗಿ ನೊಂದವರಿಗೆ ಜಾಗ್ರತೆ ಜಾಗ್ರತೆಯಾಗಿ ಪರಿಹಾರ ಧನ ಕಾಲಕ್ಕೆ ಸರಿಯಾಗಿ ತಲಪಿದರೆ ಆಗ ಮಾತ್ರ ಸರ್ಕಾರ ಕೈಗೊಂಡಿರುವ ಕಾರ್ಯಕ್ಕೆ ಯಶಸ್ಸು ದೊರೆಯುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇನ್ನು ಪಿ.ಡಬ್ಲ್ಯು. ಇಲಾಖೆಯಲ್ಲಿಯೂ ಕೆಲಸ ಜಾಗ್ರತೆಯಾಗಿ ಆಗಬೇಕು. ಇನ್ನು ಕೆಲವು ಸಂದರ್ಭಗಳಲ್ಲಿ ಸಂಬಂಧಪಟ್ಟ ಪ್ರತಿನಿಧಿಗಳು ಅಲ್ಲಿಗೆ ಹೋಗಿ ಏನಾದರೂ ಒಂದು ಕೆಲಸವಾಗಬೇಕಾಗಿದೆಯೆಂದು ಕೇಳಿದರೆ ಅವರು ಹೊಸ ಕೆಲಸಕ್ಕೆ ದುಡ್ಡು ಇಲ್ಲ, ಹಳೆಯ ಕೆಲಸಕ್ಕೇ ಇನ್ನೂ ಎಷ್ಟೋ ಹಣಬೇಕು ಎಂದು ಆ ಇಲಾಖೆಯವರು ಹೇಳುತ್ತಾರೆ ಎನ್ನುವ ನಿದರ್ಶನಗಳನ್ನು ನಾನು ಎಷ್ಟೋ ಕೇಳಿದ್ದೇನೆ. ಈ ವಿಚಾರವಾಗಿ ನಾನು ಈ ಸಭೆಯಲ್ಲಿ ಮಾತನಾಡಿದರೆ ಮಂತ್ರಿಗಳು ಇಲಾಖೆಯ ಅಧಿಕಾರಿಗಳಿಗೆ ಸಂಬಂಧಪಟ್ಟ ಬಾಬುಗಳಿಗೆ ಬಡ್ಜೆಟ್ಟಿನಲ್ಲಿ ಒದಗಿಸಲಾಗಿದ್ದ ಹಣವನ್ನೆಲ್ಲಾ ಅಲಾಟ್ ಮಾಡಿದ್ದೇವೆ ಎಂದು ಹೇಳುತ್ತಾರೆ. ಆದರೆ ನಿಜವಾಗಿ ಹೋಗಿ ನೋಡಿದರೆ ಖಂಡಿತವಾಗಿ ಆ ರೀತಿ ಹಣ ಇಲಾಖೆಯ ಅಧಿಕಾರಿಗಳಿಗೆ ಸೇರಿಯೇ ಇರುವುದಿಲ್ಲ. ಅಂದಮೇಲೆ ಇವರ ನೀತಿ ಹೇಗಿದೆಯೆಂದರೆ "ನಂಕಟ ಬಂದಾಗ ವೆಂಕಟರಮಣ" ಎಂಬಂತಿದೆ. ಬೇರೆ ಕಾಲದಲ್ಲಿ ಇಂತಹ ಪ್ರಸಂಗಗಳು ಬರುವುದಕ್ಕೆ ಮುಂಚಿತವಾಗಿಯೇ ಮುಂಜಾಗರೂಕತೆಯಿಂದ ಸೂಕ್ತ ಕ್ರಮಗಳನ್ನು ಇವರು ಕೈಕೊಳ್ಳುವುದಿಲ್ಲ. ಈ ಸರ್ಕಾರ ಅಂತಹ ಘೋರಣಿಯನ್ನು ಇನ್ನೂ ನಿರ್ಮಿಸಿಕೊಂಡಿಲ್ಲ. ಕ್ಷಾಮಡಾಮರಗಳಿಂದ ಮತ್ತು ಪ್ರವಾಹಗಳಿಂದ ಪೀಡಿತರಾದ ಜನಗಳಿಗೆ ಬೇಕಾದ ಸಹಾಯವನ್ನು ಮಾಡುವ ಅವಕಾಶ ಈ ಸರ್ಕಾರಕ್ಕೆ ಇದೆ. ಮುಖ್ಯವಾಗಿ ಈಗಿರತಕ್ಕ ಪರಿಸ್ಥಿತಿಯನ್ನು ಅದಷ್ಟು ಜಾಗ್ರತೆ ಹೋಗಲಾಡಿಸಲು ಖಾಯಂ ಪರಿಹಾರ ಕಾರ್ಯಕ್ರಮವನ್ನು ತೆಗೆದುಕೊಂಡು ಅಂಥಾದ್ದನ್ನು ತಡೆಗಟ್ಟಬೇಕು. ಪಾತ್ರ ಎತ್ತರವಿರುವ, ಮತ್ತು ಆಳ ಇರುವ ಜಾಗದಲ್ಲಿ ಖಾಯಂ ಆದ ಒಳ್ಳೆಯ ಬಂಡುಗಳನ್ನು ಹಾಕಿ ಸುತ್ತಮುತ್ತ ಪ್ರದೇಶಗಳ ಬೆಳೆ ನಾಶವಾಗದಂತೆ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಹಾಗೆ ಈ ಸರ್ಕಾರದವರು ಮಾಡುತ್ತಿಲ್ಲ. ಇದನ್ನೆಲ್ಲಾ ನೋಡಿದರೆ ಕೇವಲ ಉತ್ಕಟ ಪರಿಸ್ಥಿತಿ ಒದಗಿದಾಗ ಮಾತ್ರ ಸರ್ಕಾರದವರು ಸೂಕ್ತಕ್ರಮವನ್ನು ತೆಗೆದುಕೊಳ್ಳುತ್ತಾರೆ. ಇಲ್ಲದಿದ್ದರೆ ಇಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ನಾವು 19ನೆಯ ತಾರೀಖು ಇಲ್ಲಿ ಸಮಾವೇಶಗೊಳ್ಳುವುದಕ್ಕೆ ಮುಂಚೆ ದೇಶವಾದ್ಯಂತ ಕ್ಷಾಮಪೀಡಿತವಾಗಿರತಕ್ಕ ಸಂದರ್ಭವಿತ್ತು. ಆ ರೀತಿ ಇದ್ದಾಗ್ಗೆ ಕೇವಲ 10-12 ದಿವಸಗಳವರೆಗೆ ಈ ಸಭೆಯಲ್ಲಿ ಅದರ ಬಗ್ಗೆ ವ್ಯವಹಾರ, ಚರ್ಚೆಗಳನ್ನು ನಡೆಸಿ ಈಗ ಈ ಮೀಟಿಂಗನ್ನು ಅಡ್ಜರ್ನ್ ಮಾಡುವುದನ್ನು ನೋಡಿದರೆ ನಿಜವಾಗಿ ಅದಕ್ಕಾಗಿ ಒದಗತಕ್ಕ ಖರ್ಚು ವೆಚ್ಚಗಳು, ಹಾಕಿಕೊಂಡಿರತಕ್ಕ ಪ್ರೋಗ್ರಾಂಗಳ ಬದಲಾವಣೆ, ಚರ್ಚೆ ಮಾಡಬೇಕಾಗಿದ್ದಂಥ ಮನೂದೆಗಳ ಪ್ರತಿಗಳನ್ನು ಇತ್ಯಾದಿ ಪುನಃ ಪ್ರಿಂಟ್ ಮಾಡಿಸುವುದು — ಈ ಬಾಬುಗಳಿಗೆಲ್ಲಾ ಎಷ್ಟು ನಷ್ಟವಾಗುತ್ತದೆ ಎಂಬುದನ್ನು ನಾವೆಲ್ಲರೂ ಮತ್ತು ಸರ್ಕಾರದವರು ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳಬೇಕಾಗಿದೆ. ಆದುದರಿಂದ ಈಗ ಅಸೆಂಬ್ಲಿಯನ್ನು ಅಡ್ಜರ್ನ್ ಮಾಡಿ ಪುನಃ ಸಮಾವೇಶಗೊಳ್ಳಬೇಕಾದರೆ ಬಹಳ ಖರ್ಚಾಗುತ್ತದೆ ಮತ್ತು ಸರ್ಕಾರಕ್ಕೂ ಹೆಚ್ಚಿನ ವೆಚ್ಚವಾಗುತ್ತದೆ. ಅದಕ್ಕಾಗಿಯೇ ಕೇಂದ್ರ ಸರ್ಕಾರದಲ್ಲಿ ಕೈ ಒಡ್ಡಬೇಕಾಗುತ್ತದೆ. ದೂರದೃಷ್ಟಿ ಇಲ್ಲದೆ ಸರ್ಕಾರದವರು ಇಂತಹ ಕಾರ್ಯಗಳನ್ನು ಮಾಡುವುದರಿಂದ ಸರ್ಕಾರದ ಘನತೆಗೆ ಇದು ಯೋಗ್ಯವಲ್ಲವೆಂದು ನಾನು ಅನಿವಾರ್ಯದಿಂದ ಹೇಳಬೇಕಾಗಿದೆ. ನನ್ನ ದೃಷ್ಟಿಯಲ್ಲಿ ಯಾವ ಕಡೆ ನೋಡಿದರೂ ಶೀಘ್ರವಾದ ಕ್ರಮಗಳನ್ನು ಸರ್ಕಾರದವರು ಕೈಗೊಂಡಿಲ್ಲವೆಂದು ನಾನು ಖಂಡಿತವಾಗಿ ಹೇಳಬಲ್ಲೆ. ಈ ರೀತಿಯಾಗಿ ಬೇಜವಾಬ್ದಾರಿಯಿಂದ, ಅಸಡ್ಡೆಯಿಂದ ಕ್ರಮವನ್ನು ತೆಗೆದುಕೊಂಡಿರುವುದನ್ನು ನೋಡಿದರೆ ಜನಗಳ ಹಿತ ದೃಷ್ಟಿಯಿಂದ ಸರಿಯಲ್ಲ.

ಹೇಸರ'ನಲ್ಲ ನೋಡುತ್ತಿದ್ದರೆ ಉತ್ತರ ಇಂಡಿಯದಲ್ಲಿ ಹರಿಯತಕ್ಕ ಗಂಗಾ, ಬ್ರಹ್ಮಪುತ್ರಾ ಮತ್ತು ಇತರ ನದಿಗಳ ಪ್ರವಾಹದ ಹಾವಳಿಯಿಂದ ಅಲ್ಲಿ ಉಂಟಾಗಿರತಕ್ಕ ನಷ್ಟವನ್ನು ನೋಡಿದರೆ ಅಲ್ಲಿನ

(ಶ್ರೀ ವೈ. ವೀರಪ್ಪ)

ಜನತೆ ಶ್ರದ್ಧೆಯಿಂದ, ದೇವರ ಮೇಲಿನ ಭಕ್ತಿಯಿಂದ ಕೆಲಸ ಕಾರ್ಯಗಳನ್ನು ಮಾಡುತ್ತಿಲ್ಲವೆಂದು ನನಗೆ ಭಾಸವಾಗುತ್ತದೆ. "ಸರ್ಕಾರದ ಕೆಲಸವೇ ದೇವರ ಕೆಲಸ" ಎಂಬ ವಿಷಯದ ಆಧಾರದ ಮೇಲೆ ಕೆಲಸ ಕಾರ್ಯಗಳು ನಡೆಯುತ್ತಿಲ್ಲ. ಆದುದರಿಂದ ಈ ಸಂದರ್ಭದಲ್ಲಿ ಎಲ್ಲಾ ದೃಷ್ಟಿಯಿಂದಲೂ ನಾನು ಒತ್ತಾಯ ಮಾಡುವುದು ಏನೆಂದರೆ ನಮ್ಮ ದೇಶದಲ್ಲಿ ಈ ಪ್ರವಾಹ ಗಳ ಹಾವಳಿಯನ್ನು ತಡೆಗಟ್ಟಬೇಕಾದರೆ ಖಾಯಂ ಆಗಿರುವ ಪರಿಹಾರ ಕಾರ್ಯಕ್ರಮಗಳನ್ನು ಜರೂರಾಗಿ ಕೈಗೊಳ್ಳಬೇಕು. ಈ ಮಾತನ್ನು ಅರ್ಥಶಾಸ್ತ್ರಜ್ಞರು ಮತ್ತು ತಜ್ಞರು ಒಪ್ಪುತ್ತಾರೆಂದು ನಾನು ಹೇಳು ತ್ತೇನೆ. 1947ಕ್ಕೆ ಮುಂಚೆ ಖಜಾನೆಯಲ್ಲಿ ರಿಜರ್ವ್ ಆಗಿ 36-37 ಕೋಟಿ ರೂಪಾಯಿ ಗಳಿದ್ದುವು. ಈಗ ಕೇಂದ್ರಸರ್ಕಾರದಿಂದ ಸಾಲ ತರಬೇಕಾಗಿದೆ. ಆದುದ ರಿಂದ ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯಪಡಿಸುವುದೇನೆಂದರೆ ಸರ್ಕಾರ ಯಾವಾ ಗಲೂ ದೇಶದ ಜನಗಳ ಹಿತದೃಷ್ಟಿಯಿಂದ ಕೆಲಸ ಮಾಡಬೇಕು. ಇಂತಹ ಸಂದರ್ಭಗಳಲ್ಲಿ ಹಂಗಾಮಿ ಕೆಲಸಗಳನ್ನು ಮಾತ್ರ ಕೈಗೊಳ್ಳುವುದು ಜನಗಳ ಹಿತಕ್ಕೆ ಸರಿಹೋಗುವುದಿಲ್ಲ. ಸರ್ಕಾರದವರು ಅದ ಕ್ಕಾಗಿ ಖಾಯಂ ಆಗಿರತಕ್ಕ ಪರಿಹಾರ ಕಾರ್ಯಗಳನ್ನು ಕೈಗೊಳುವುದು ಲೇಸು. ಆಪತ್ತು ಬಂದಾಗ ವೆಂಕಟರಮಣ ಎಂಬ ತತ್ವವನ್ನು ಸರ್ಕಾರ ಅನುಸರಿಸಿ ದರೆ ನಿಜವಾಗಿ ಆಗ ಮಾಡತಕ್ಕ ನಮನ್ತ ಕೆಲಸ ಕಾರ್ಯಗಳು ಅಷ್ಟಾಗಿ ಸರಿಹೋಗುವುದಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಹಾಗಾದರೆ ಮಳೆ ಬರುವುದನ್ನು ತಡೆಗಟ್ಟಬೇಕೆಂದು ಹೇಳುತ್ತೀರಾ? ಹೇಮಾವತಿನದಿಯಲ್ಲಿ ಹೆಚ್ಚು ನೀರು ಬಂದು ಬಹಳ ಫ್ಲೋರ್ಸಿನಿಂದ ಹರಿಯುತ್ತಿರುವಾಗ ಅದನ್ನು ತಡೆ ಗಟ್ಟುವಾಗ ಕೆಲವು ಸಂದರ್ಭಗಳಲ್ಲಿ ತನ್ನ ಪ್ರಾಬ ವನ್ನು ಛಿಟ್ಟು ಬೇರೆ ಕಡೆಗೆ ಅಥವಾ ಯಾವುದೋ ಕಡೆಗೆ ಹರಿದು ಹೋಗುತ್ತದೆ. ಅಂತಹ ಸಂದರ್ಭದಲ್ಲಿ ಫ್ಲಡ್ ಕಂಟ್ರೋಲನ್ನು ಯಾವ ರೀತಿ ಮಾಡಬೇಕು? ಸಂಕಟ ಬಂದಾಗ ವೆಂಕಟರಮಣ ಎಂದು ಮಾನ್ಯ ಸದಸ್ಯರು ಸರ್ಕಾರಕ್ಕೆ ಹೇಳಿಸಿದುದನ್ನು ನಾನು ಖಂಡಿತ ಒಪ್ಪುವುದಿಲ್ಲ. ಪ್ರಕೃತಿ ದೃಷ್ಟಿಯಲ್ಲಿ ಮಳೆ ಬೀಳುವಾಗ ಅದು ಯಾವ ಪ್ರದೇಶದಲ್ಲಿ, ಯಾವಾಗ, ಬೀಳು ತ್ತದೋ! ಅದಕ್ಕೆ ನಾವೇನು ಮಾಡಬೇಕು?

ಶ್ರೀ ವೈ. ವೀರಪ್ಪ.—ಹಾಗೆ ಹೇಳಿದರೆ ಸರ್ಕಾರದ ಜವಾಬ್ದಾರಿ ತೀರಿದ ಹಾಗಲ್ಲ. ಬೇಕಾದಷ್ಟು ತಜ್ಞರು, ಎಜಿನಿಗಳು ಇದ್ದಾರೆ. ಅಂದಮೇಲೆ ಇದುಸಾಧ್ಯ ಎಲ್ಲ ಎಂದರೆ ಸಾಲದು. ಸರ್ವೆಮಾಡಬೇಕು. ಯಾವಯಾವ ಪ್ರದೇಶದಲ್ಲಿ ಖಾಯಂ ಆಗಿ ಪ್ರವಾಹ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು, ಇಂತಹ ಪ್ರವಾಹ ಪೀಡಿತಕ್ಕೆ ಒಳಗಾಗಿದ್ದಂತಹ ಪರಿಸ್ಥಿತಿಯನ್ನು ಯಾವರೀತಿ ತಡೆಗಟ್ಟಬೇಕು ಎಂಬು ದನ್ನು ಸರ್ವೆಮಾಡಿ ನೋಡಿದರೆ ಈ ಕೆಲಸವಾಗುತ್ತದೆ. ಉದಾಹರಣೆಗೆ ಒಂದು ಕಡೆ ಹಳ್ಳ ಆಗಿರುತ್ತದೆ. ಮಳೆಯ ನೀರು ಎತ್ತರವಾದ ಪ್ರದೇಶದಿಂದ ಹರಿದು ಕೊಂದು ಹಳ್ಳಕ್ಕೆ ಬಂದು ಸೇರಿ ಅದು ತುಂಬಿ ಹೋರಗೆ ಹೋಗಿ ನಿಜವಾಗಿ ಸುತ್ತಮುತ್ತಲಿರುವ ಬೆಳೆಗಳನ್ನು ನಾಶಮಾಡುತ್ತದೆ. ಆದುದರಿಂದ ಸರ್ಕಾರ ದವರು ಖಾಯಂ ಬಂಡುಗಳನ್ನು ಅಲ್ಲಿ ಕಟ್ಟಬೇಕು. ಮತ್ತು ಹೆಚ್ಚು ನೀರೂ ಸಹ ವೇಸ್ಟಾಗಿ ಕೆಳಗೆ ಹೋಗದಂತೆ ಅದನ್ನು ಉಪಯೋಗಿಸುವ ಕ್ರಮವನ್ನೂ ಸಹ ತೆಗೆದುಕೊಳ್ಳಬೇಕು. ಸರ್ಕಾರದವರು ಮನಸ್ಸಿ ನಲ್ಲಿ ಏನೇನೋ ಶಂಕೆಗಳನ್ನಿಟ್ಟುಕೊಂಡು ಅತ್ಯವಶ್ಯಕ ವಾಗಿ ಆಗಬೇಕಾದ ಎರಡು ಮೂರು ಪ್ರಾಜೆಕ್ಟ್‌ಗಳ ಕೆಲಸವನ್ನು ನಮ್ಮ ಜಿಲ್ಲೆಯಲ್ಲೂ ಮತ್ತು ಕೊಡಗಿ ನಲ್ಲೂ ಆಗಬೇಕಾದ ಹಾರಂಗಿ, ಕಂಬದಕಡ ಮತ್ತು ಗೊರೂರು ಯೋಜನೆಗಳನ್ನು ಕೈಗೊಳ್ಳಲು ಹಿಂಜರಿ ಯುತ್ತಿದ್ದಾರೆ. ಹಾಗೇ ಕೃಷ್ಣಗೋದಾವರಿ ನದಿಗಳ 1851ರ ಅವಾರ್ಡ್‌ನ್ನು ಬದಲಾಯಿಸಲು ಕೇಂದ್ರ ಸರ್ಕಾರಕ್ಕೆ ಈ ಸಭೆಯಿಂದ ತೀರ್ಮಾನವಾದ ನಿರ್ಣಯವನ್ನು ಕಳುಹಿಸಿದಾಗ್ಗೂ ಇಲ್ಲಿಯ ವರೆಗೂ ನಮಗೆ ಅವರಿಂದ ಯಾವ ಒಂದು ನಿರ್ದಿಷ್ಟವಾದ ನೂಚನೆಯೂ ಬಂದಿಲ್ಲ. ಈ ವಿಚಾರದಲ್ಲಿ ಅಲ್ ಇಂಡಿಯಾ ಲೀಡರುಗಳು ದಿನಕ್ಕೊಂದು ಸ್ಟೇಟ್‌ಮೆಂಟುಗಳನ್ನು ಕೊಡುತ್ತಿದ್ದಾರೆ. ಹೀಗಿರುವಾಗ ಸರ್ಕಾರದವರು ಈ ವ್ಯವಹಾರಗಳ ಹೊಣೆಯನ್ನೆಲ್ಲ ಹೊತ್ತಿದ್ದರೂ ಸದಸ್ಯರಿಗೆ ನೀವು ಸರಿಯಾಗಿ ಕೆಲಸ ಕಾರ್ಯಗಳನ್ನು ಮಾಡುತ್ತಿಲ್ಲವೆಂದು ಹೇಳುತ್ತಿರು ವುದರ ಅರ್ಥವಾದರೂ ಏನು! ಈ ದಿವಸ ಸರ್ಕಾರ ದವರು ಒದಗಿಸಿರತಕ್ಕ ಪರಿಹಾರ ಯಾವ ರೀತಿಯಲ್ಲಿದೆ ಎಂದರೆ The proof of the pudding is in the eating ಎಂದು ಹೇಳಬೇಕಾಗಿದೆ. ಈ ದಿವಸ ಸರ್ಕಾರದವರ ನ್ಯೋರವು ಜನರಿಗೆ ನೇರವಾಗಿ ಮತ್ತು ಶೀಘ್ರವಾಗಿ ತಲುಪುತ್ತಿಲ್ಲ. ಆದುದರಿಂದ ಸರ್ಕಾರ ದವರು ಈ ದಿವಸ ಅವರು ಏನೊಂದು ನೆರವನ್ನು ಕಷ್ಟದಲ್ಲಿರತಕ್ಕ ಜನರಿಗೆ ನೀಡುತ್ತೇವೆಂದು ಹೇಳು ತ್ತಿದ್ದಾರೋ ಅದು ಆ ಜನರಿಗೆ ನೇರವಾಗಿ–ಬೇಗ ತಲುಪುವಂತೆ ವ್ಯವಸ್ಥೆಮಾಡಬೇಕು. ನಾನೀಗ ಉದಾ ಹರಣೆಗೆ ಹೇಳುವುದಾದರೆ ನನ್ನ ಕ್ಷೇತ್ರದಲ್ಲೇ ಹೊಳೆ ನರಸೀಪುರಕ್ಕೆ ಸಮೀಪದಲ್ಲಿ ಹೊಳೆ ದಡದಲ್ಲಿ ಸುಮಾರು ಒಂದು ನೂರು ಉಪ್ಪಾರರ ಸಂಸಾರಗಳಿರುತ್ತವೆ. ಅವರು ಆ ನದೀತೀರದಲ್ಲಿ ಹೂ–ತರಕಾರಿ ಇತ್ಯಾದಿ ಗಳನ್ನು ಬೆಳೆದು ತಮ್ಮ ಜೀವನ ನಡೆಸುತ್ತಿದ್ದರು. ಈ ದಿವಸ ಅವರ ಜಮೀನುಗಳೆಲ್ಲ 30 ದಿವಸಗಳಕಾಲ ಅವಿಚ್ಛಿನ್ನವಾಗಿ ನೀರುಮುಳುಗಡೆಯಾಗಿವೆ. ಅಂದ ಮೇಲೆ ಅವರ ಜೀವನಾಧಾರದಗತಿಯೇನು? ಅವರಿಗೆ ಇನ್ನು ಬೇರೆ ಯಾವ ಜೀವನಾದಾರವೂ ಇಲ್ಲದೆ ತುಂಬಾ ತೊಂದರೆಗೀಡಾಗಿದ್ದಾರೆ. ಇದರಿಂದಲೇ ಸರ್ಕಾರದವರು ಈ ಕಷ್ಟನಷ್ಟಗಳಿಗೀಡಾದ ಜನರಿಗೆ ಎಷ್ಟರಮಟ್ಟಿಗೆ ಸಹಾಯ ನೀಡುತ್ತಿದ್ದಾರೆಂಬುದು ಗೊತ್ತಾಗುತ್ತದೆ. ಸರ್ಕಾರದವರ ಸಹಾಯವೆಲ್ಲ ಕೇವಲ ಹುಕುಂಗಳ ಮೇಲಿರುತ್ತದೆ. ಇವರ ಈ ಹುಕುಂಗಳ ಮೇಲಿರುವ ಪರಿಹಾರ ಅವರಿಗೆ ಬೊರೆ ತಂತಾಗಲಲ್ಲ. ಅದೇ ನನ್ನ ಕ್ಷೇತ್ರದಲ್ಲಿ ಅವಾನಿಕೆರೆ ಬಯಲಿನಲ್ಲಿ ಇನ್ನೇನು ಬತ್ತದ ಕಟಾವಾಗಬೇಕೆನ್ನುವಷ್ಟರಲ್ಲೇ ಮಳೆಬಿದ್ದು ಆ ಜಮೀನಿನಲ್ಲೆಲ್ಲಾ ಒಂದೇ ಸಮನಾಗಿ 20—25 ದಿವಸಗಳ ಪರ್ಯಂತ ನೀರು ನಿಂತಿತು. ಇದರ ಪರಿಣಾಮದಿಂದ ಕೈಗೆ ಬರ ಬೇಕಾಗಿದ್ದ ಬೆಳೆಯೆಲ್ಲ ಅಲ್ಲೇ ಕೊಳೆತು ಹೋಯಿತು. ಹೀಗೆ ಸುಮಾರು 150 ಎಕರೆಗಳಲ್ಲಿ ಕಾರುಬತ್ತದ ಬೆಳೆ ಹಾಳಾಗಿದೆ. ಸರ್ಕಾರದವರು ಸುಮ್ಮನೆ ನಮಗೆ ವರದಿ ಬಂದಿದೆ ಎಂದು ಹೇಳಿದರೆ ಸಾಲದು. ಅವರು ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿ ನೋಡಿದರೆ ತಾನೆ ಅವರಿಗೆ ನಿಜಾಂಶ ತಿಳಿಯು ವುದು. ಹೀಗೆ ನನ್ನ ಕ್ಷೇತ್ರದಲ್ಲಿನ್ನೂ ಕೆಲವು ಗ್ರಾಮ ಗಳಲ್ಲ ಎಂದರೆ ಹಂಗರ ಹಳ್ಳಿ, ಕಾಮಸಮುದ್ರ, ಹನುಮನಹಳ್ಳಿ, ಮಾವಿನಕೆರೆ ಈ ಗ್ರಾಮಗಳಲ್ಲೂ ಪೂಕವಳ್ಳಿ, ಪಡವಲ ಹಿಪ್ಪೆ ಮುಂದಗೌಡಹಳ್ಳಿ,

ಕಬ್ಬುಹಳ್ಳಿ ಗ್ರಾಮಗಳಲ್ಲೂ ಬೆಳೆ ವಿಪರೀತವಾಗಿ ನಾಶವಾಗಿದೆ.

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರು ಎಷ್ಟೇ ಹೇಳಿದರೂ ಅವರ ತಾಲ್ಲೂಕಿನಲ್ಲಿ ಅಷ್ಟು ನಷ್ಟ ವಾಗಿಲ್ಲ.

ಶ್ರೀ ವೈ. ವೀರಪ್ಪ.—ನ್ಯಳವಿದ್ಯಮಾನವನ್ನರಿಯದೆ, ಅಂಕ ಅಂಶಗಳ ಆಧಾರವಿಲ್ಲದೆ ಒಬ್ಬ ಜವಾಬ್ದಾರಿಯುಳ್ಳ ಸದಸ್ಯನು ಇಂಥ ಸಭೆಯಲ್ಲಿ ಇಷ್ಟು ಧೈರ್ಯವಾಗಿ ಇಲ್ಲದ ವಿಚಾರಗಳನ್ನು ಹೇಳಲು ಸಾಧ್ಯವಿದೆಯೇನು? ಈ ದಿವಸ ಸರ್ಕಾರದವರು ನನ್ನ ಜೊತೆಯಲ್ಲಿ ಬರಲಿ; ಮೂಡಲು ಹಿಪ್ಪೆ, ಪಡವಲು ಹಿಪ್ಪೆ–ಮಾಷಿನ ಕೆರೆ ಹಾಗೇವಾಳ ಮತ್ತು ಕುಂಕುಮದ ಹೊನ್ನೂರು ಇತ್ಯಾದಿ ಅನೇಕ ಗ್ರಾಮಗಳಲ್ಲಿ ನಾಟಿದ್ದ ಆಲೂಗೆಡ್ಡೆ ಬೆಳೆಯೆಲ್ಲ ನಾಶವಾಗಿ ಅವರಿಗೆ 10—15 ಸಾವಿರ ರೂಪಾಯಿಗಳ ನಷ್ಟವಾಗಿದೆ; ತೋರಿಸುತ್ತೇನೆ. ಈ ದಿವಸ ಹೂವಿನಹಳ್ಳಿ, ಬಾಗೇವಾಳ, ಕುಂಕುಮದ ಹೊನ್ನೂರು ಈ ಗ್ರಾಮಗಳ ಜನರೆಲ್ಲ ಬಹಳ ಕಷ್ಟಕ್ಕೆ ಸಿಕ್ಕಿದ್ದಾರೆ. ಸರ್ಕಾರ ಈ ದಿವಸ ಅವರಿಗೆ ಪರಿಹಾರ ನೀಡದಿದ್ದರೆ ಅವರಿಗೆ ಬೇರೆ ಇನ್ನಾವ ಸಹಾಯದ ಮಾರ್ಗಗಳೂ ಇಲ್ಲ. ಇದರ ಜೊತೆಗೆ ಕಾಫಿ, ಏಲಕ್ಕಿ, ಮೆಣಸು ಈ ಬೆಳೆಗಳೂ ಮತ್ತು ಅಡಕೆಬೆಳೆ ಇವೆಲ್ಲ ಲಕ್ಷಾಂತರ ರೂಪಾಯಿಗಳ ವರೆಗೆ ಲುಕ್ಸಾನಾಗಿರುತ್ತವೆ. ಹೀಗೆ ಜನರು ಕಷ್ಟಕ್ಕೆಸಿಕ್ಕಿ ಕಣ್ಣು ಕಣ್ಣು ಬಿಡುತ್ತ ಕುಳಿತಿರುವಾಗ ಇಲ್ಲಿ ರೆವಿನ್ಯೂ ಮಂತ್ರಿಗಳು ಆ ಜನರಿಗೆಲ್ಲ ಕೂಡಲೆ ಪರಿಹಾರವನ್ನು ನೀಡಲಾಗಿದೆಯೆಂದು ಹೇಳುತ್ತಿದ್ದಾರೆ. ಆದರೆ ಇವರು ಹೇಳುತ್ತಿರುವಂತೆ ಪರಿಹಾರ ಅನೇಕರಿಗೆ ದೊರೆತಿಲ್ಲ. ಈ ದಿವಸ ನಮ್ಮ ಸರ್ಕಾರ ಕೇಂದ್ರ ಸರ್ಕಾರಕ್ಕೆ ಸಹಾಯಕ್ಕಾಗಿ ಕೈಮುಗಿದುಕೊಂಡು ನಿಲ್ಲುವ ಸ್ಥಿತಿ ಬಂದಿದೆ. ಏನೇ ಆಗಲಿ 10—12 ಕೋಟಿಗಳಿಗಿಂತ ಹೆಚ್ಚಿನ ಸಹಾಯವನ್ನು ಕೇಂದ್ರ ಸರ್ಕಾರದಿಂದ ನಮ್ಮ ಸರ್ಕಾರ ಪಡೆಯಬೇಕಾಗಿದೆ. ಇಲ್ಲಿ ಆಗಿರತಕ್ಕೆ ನಷ್ಟ 10—12 ಕೋಟಿಗಳಿಗೂ ಜಾಸ್ತಿಆಗಿದೆ. ಆದುದರಿಂದ ಇವರು ಹೆಚ್ಚಿನ ಸಹಾಯವನ್ನು ಕೇಂದ್ರದಿಂದ ಪಡೆಯಲೇ ಬೇಕಾಗಿದೆ. ಇನ್ನು ಬೇರೆ ಮಾರ್ಗವೇ ಇಲ್ಲ. ಈಗ ಈ ಸಹಾಯ ನೀಡುವುದರ ಜೊತೆಗೆ ಈ ನದಿಗಳ ಪ್ರವಾಹದಿಂದ ಆಗಿಂದಾಗ್ಗೆ ಉಂಟಾಗುತ್ತಿರುವ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟತಕ್ಕ ಮಾರ್ಗಗಳೇನಿವೆ ಎಂಬುದನ್ನು ಈಗಿನಿಂದಲೇ ನೋಡಿಕೊಳ್ಳಬೇಕಾಗಿದೆ. ಇಂಥ ಅಪಾಯಗಳಿಂದ ಜನ-ಜಾನುವಾರುಗಳನ್ನು ರಕ್ಷಿಸಬೇಕಾದ್ದು ಸರ್ಕಾರದ ಕರ್ತವ್ಯ. ಇನ್ನು ಕಡೆಯದಾಗಿ ನಾನು ತಿಳಿಸಬೇಕಾಗಿರುವುದಿಷ್ಟೆ. ಈಗ ಪ್ರವಾಹದ ಹಾವಳಿಯಿಂದ ತೊಂದರೆಗೀಡಾಗಿರಕ್ಕ ಜನ-ಜಾನುವಾರುಗಳಿಗೆ ಸರಕಾರದವರು ಕೂಡಲೆ ಹೆಚ್ಚಿನ ನೆರವನ್ನು ನೀಡಬೇಕೆಂದು ಹೇಳಿ ಈಗ ಈ ಪ್ರವಾಹದ ಹಾವಳಿಗೆ ತುತ್ತಾಗಿರತಕ್ಕ ಜನ ಜಾನುವಾರುಗಳ ಸಂಸಾರದವರಿಗೆ ಅವರಿಗುಂಟಾಗಿರತಕ್ಕ ಕಷ್ಟ-ನಷ್ಟ-ನೋವುಗಳನ್ನು ಸಹಿಸತಕ್ಕ ಶಕ್ತಿಯನ್ನು ಭಗವಂತನು ಅವರಿಗೆ ಕೊಡಲೆಂದು ದೇವರನ್ನು ಪ್ರಾರ್ಥಿಸಿ ಈ ನೊಂದ ಜನರಿಗೆ ಸಹಾಯ ನೀಡತಕ್ಕ ಬಗ್ಗೆ ನನಗೆ ಈ ಅನಂಬ್ಲಿಯ ಸದಸ್ಯನಾಗಿರತಕ್ಕ ಸಂಬಂಧದಲ್ಲಿ ದೊರೆಯುತ್ತಿರುವ ಒಂದು ತಿಂಗಳ ಸಂಭಾವನೆಯನ್ನು ಕೊಡಬೇಕೆಂಬುದಾಗಿ ನಾನು ಮನಸ್ಸು ಮಾಡಿದ್ದೇನೆಂಬ ಅಂಶವನ್ನು ಈ ಸಭೆಗೆ ತಿಳಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

*Sri S. D. KOTHAVALE (Chikodi).—Mr. Speaker, Sir, I shall try to bring to the notice of this Hon'ble House one or two suggestions very briefly. The havoc caused is two-fold—by mansoon and by excess of floods. My friend the Leader of the Opposition touched a few points with regard to long term relief works to be undertaken in this behalf. I would say one or two words in that connection. It is said that flood control can be effected by having side canals for allowing the excess water to flow away so that the floods of a particular area can be reduced considerably. Now, irrigation also requires such canals for the purpose of supplying water to lands. So, this will serve as a measure both to meet the scarcity condition as well as flood control. It is worthwhile considering this long term measure.

My Hon'ble friend Sri Mallaradhya suggested that a Flood Control Board should be constituted. My suggestion is that there must be one Board only to control both famine and flood. These two can be brought together.

With respect to the short term remedy, I do not want to say much. I compliment the Government for the measures already taken by them and for the speedy attention they paid to these people. The Hon'ble Minister Sri K. F. Patil and Sri Naghnoor had come to my area and I apprised them of the situation there, taking them to the villages which suffered by the water of that Krishna River.

There are five or six villages which suffered from the flood waters and having seen the nature of suffering of the marooned villagers, one remedy suggests itself to me. The Krishna Flood waters surround all these villages and small islands are created. It is not possible for the villagers to leave the villages because of the waters surrounding them. When we visited these places, we could see people standing at one end and on the other we could see thousands of villagers marooned—the people of one particular village which has a population of 5,000 were sitting on a hill-top. Fortunately, there is a hill

(SRI S. D. KOTHAVALE)

there. They were sitting helplessly. The idea struck me whether the Government should or should not take some measures to relieve the difficulty of the marooned people. The Government should have some motor launches and place them at such points as *Ankli* in my constituency or at such other places wherever occasion arises to relieve and rescue the marooned people. My suggestion to the Government in this connection is that they should purchase a number of motor launches or mechanical launches and keep them at such important points to relieve the marooned people in times of emergency. Now the mansoon is still on and we are in the midst of the rainy season. We do not know what is going to happen. It is not too late even now to purchase these motor launches and keep them at suitable points.

Secondly, the only point that I would like to say in this connection is about the measures taken by the Government and it was prompt enough. The only suggestion is that the rules governing such relief should be liberalised and that relief may be given promptly.

And if we fail in our duty to render prompt help, the whole purpose of the emergency relief is lost.

Therefore, without taking much time of the House, I fervently appeal to the Government to purchase such launches and place them at important points.

One more point which arises in this connection is that certain purchases and other works should be treated as flood relief measures. Now the Hon'ble Minister who came and saw the situation along with me—they were convinced that if there had been a bridge across the Krishna at that a point, the position of these villages would have been better and their helpless position could have been avoided. Fortunately one bridge is proposed this year at *Ankli* across Krishna. My suggestion is that it can be taken of for construction as a very emergent and flood relief measure. I think the Government would consider these suggestions and render necessary help to the people who have been suffering very much.

*ಶ್ರೀ ಬಿ. ಕೆ. ನಾಗೂರ್ (ಬಿಜಾಪುರ).—ಮಾನ್ಯ ಸಭಾಪತಿಗಳೇ, ನಿನ್ನೆಯ ದಿವಸ ಕಂದಾಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಈ ರೀತಿ ಹೇಳಿದ್ದಾರೆ. 'In Bijapur District, on 12th July 1961, a boat carrying 54 persons and 7 bullocks capsized in the midstream while crossing the river Krishna from Dhannur to Tangadgi.' ನಮ್ಮ ವಿಜಾಪೂರ ಜಿಲ್ಲೆಯ ಬಗ್ಗೆ ನಾನು ಹೇಳುವುದಕ್ಕಿಂತಲೂ ನಿಮ್ಮವರೇ ಆಗಿರುವ ಕಂದಾಯ ಮಂತ್ರಿಗಳು ಇದನ್ನು ಹೇಳಿದ್ದಾರೆ. ಅವರು ಹೇಳಿರುವದರಿಂದ ನೀವೆಲ್ಲರೂ ನಂಬುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಬೋಟಿನಲ್ಲಿದ್ದ 81 ಜನರು ಮತ್ತು ಏಳು ಎತ್ತುಗಳಲ್ಲಿ 55 ಜನರು ನತ್ತುಹೋಗಿದ್ದಾರೆ. ಈ ದುರಂತ ನಡೆದ ಸ್ಥಳಕ್ಕೆ ಹೋಗಿ ಪ್ರತ್ಯಕ್ಷ ನೋಡಿಕೊಂಡು ಬಂದಿದ್ದೇನೆ. ಅದರಲ್ಲಿ 17 ಜನ ಹರಿಜನರ ಪರಿಸ್ಥಿತಿ ಅತಿ ಕಷ್ಟಮಯವಾಗಿದೆ. ಈ ಜನರಿಗೆ ಸಹಾಯ ಒದಗಿಸಲು ಕೂಡಲೇ ಸರಕಾರದವರು ಪರಿಹಾರ ಹಣ ಸಾಂಕ್ಷನ್ ಮಾಡಿದ್ದಕ್ಕೆ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಈ ದುರಂತಕ್ಕೆ ಈಡಾದ ಜನರ, ಹೆಣ್ಣು ಮಕ್ಕಳ, ಚಿಕ್ಕ ಚಿಕ್ಕ ಮಕ್ಕಳ ದುಃಖದ ಕೂಗು ಕೇಳಿ ಕಲ್ಲುಕೂಡ ಕರಗುವಂತಾಗಿದೆ. ಅರಣ್ಯ ಅಳುತ್ತಿದೆ. ಈ ನಿಸರ್ಗದತ್ತವಾದ ಕಷ್ಟ ಯಾವ ಪಾಪದ ಫಲವೋ ತಿಳಿಯುದು. ಹಿಂದಕ್ಕೆ ಅನೇಕ ಕಡೆ ಪ್ರವಾಹ ಪೀಡಿತ ಜನರಿಗೆ ಕೇಂದ್ರ ಸರಕಾರದವರು ವಿಮಾನದಿಂದ ಅನ್ನ ರೊಟ್ಟಿ ಚಪಾತಿ ಬ್ರೆಡ್ ಬಜ್ಜಿ ಒದಗಿಸಿದ್ದಾರೆ. ಅರೀತಿ ನಮ್ಮ ಸರಕಾದವರು ಮಾಡಬೇಕಾಗಿತ್ತು. 19ನೆಯ ತಾರೀಖು ಅಧಿವೇಶನ ಪ್ರಾರಂಭವಾದ ದಿವಸ ದೇಶದಲ್ಲಿ ಇಂಥ ಅನಿರೀಕ್ಷಿತದುರ್ಧರ ಪರಿಸ್ಥಿತಿ ಅನಾಹುತ ಉಂಟಾಗಿದೆ ಎಂದು ಹೇಳಿ ಅಧಿವೇಶನ ನಡೆಯುವದನ್ನು ನಿಲ್ಲಿಸಬಹುದಾಗಿತ್ತು, ಮತ್ತು ಸದಸ್ಯರಿಗೆ ನಿಮ್ಮ ನಿಮ್ಮ ಪ್ರವಾಹ ಪೀಡಿತ ಕ್ಷೇತ್ರಗಳಿಗೆ ಹೋಗಿ ಜನರಿಗೆ ಸಹಾಯ ಮಾಡಿ ಎಂದು ಹೇಳಬಹುದಾಗಿತ್ತು. ಆ ರೀತಿ ಹೇಳಲಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಕಷ್ಟಕ್ಕೊಳಗಾದ ಜನರು ಕಣ್ಣೀರಿಡುತ್ತ ಏನು ಸಹಾಯ ದೊರೆಯುವದೋ ಎಂದು ವಿಧಾನ ಸೌಧದ ಕಡೆಗೆ ನೋಡುತ್ತಿದ್ದಾರೆ. ಓಟು ಹಾಕಿ ಆರಿಸಿ ಕಳಿಸಿದ ಜನ ಏನು ಮಾಡುತ್ತಾರೆ ಎಂದು ನಿರೀಕ್ಷಣೆ ಮಾಡುತ್ತಿದ್ದಾರೆ. ರಾಮರಾಜ್ಯ ಮಾಡಬೇಕೆಂದಿರುವ ಹತ್ತೊಂದು ಜನ ಮಂತ್ರಿಗಳು ಇದ್ದೀರಿ. ಪ್ರವಾಹ ಪೀಡಿತ ಜನರ ಕಷ್ಟವನ್ನು ನರಿಪಡಿಸುವುದಕ್ಕೆ ಏನೇನು ಮಾಡುತ್ತಿದ್ದೀರಿ? ಇದನ್ನು ಬಹಳ ವಿಷಾದದಿಂದ ಕಳಕಳಿಯಿಂದ ಮಾತನಾಡುತ್ತಿದ್ದೇನೆ. ವಿರೋಧಿ ಪಕ್ಷದ ಸದಸ್ಯರು ಸಹ ದೇಶದ ಹಿತದೃಷ್ಟಿಯಿಂದ ತ್ಯಾಗ ಮಾಡಿದವರಾಗಿದ್ದಾರೆ. ಸರಕಾರಕ್ಕೆ ಸರಿಯಾದ ಸಲಹೆ ಸೂಚನೆಗಳನ್ನು ಕೊಡುವುದು ವಿರೋಧಿ ಪಕ್ಷದ ಕರ್ತವ್ಯವಾಗಿದೆ. ಇದನ್ನು ಮಂತ್ರಿಗಳು ತಿಳಿದುಕೊಳ್ಳಬೇಕು. ದೇಶಕ್ಕೆ ಅನಾಹುತ ಉಂಟಾದಾಗ್ಗೆ ಅದನ್ನು ಪರಿಹರಿಸುವುದು ಕಾಂಗ್ರೆಸ್ಸಿಗರಿಗೇ ಸೇರಿದುದು, ಅದನ್ನು ಕಾಂಗ್ರೆಸ್ ಜನರೇ ಮಾಡಬೇಕು ಎಂದು ತಿಳಿದುಕೊಳ್ಳುವುದು ಸರಿಯಲ್ಲ. ವಿರೋಧಿ ಪಕ್ಷದ ಸದಸ್ಯರು ಸಹ ಜನರಿಂದ ಆರಿಸಿ ಈ ಸಭೆಗೆ ಬಂದಿದ್ದಾರೆ. ದೇಶದ ಹಿತದೃಷ್ಟಿಯಿಂದ ಕೆಲಸ ಮಾಡುವುದು ಅವರ ಕರ್ತವ್ಯವೂ ಆಗಿದೆ. ಒಬ್ಬಿಬ್ಬರು ಮಂತ್ರಿಗಳು ಮಾತ್ರ ಪ್ರವಾಹ ಪೀಡಿತ ಪ್ರದೇಶಕ್ಕೆ ಹೋಗಿ ನೋಡಿಕೊಂಡು ಬಂದರು. ಬಾಕಿ ಮಂತ್ರಿಗಳ ಏನು ಮಾಡುತ್ತಿದ್ದರು? ಎಲ್ಲರೂ ಏಕೆ ಹೋಗಲಿಲ್ಲ

ಇವರ ನುಡುಗಾಡ ಅಮ್ಯತ ಹನ್ತದಿಂದ ಶಂಕುಸ್ಥಾಪನೆ ಮಾಡಲು ಮಾತ್ರ ಎಲ್ಲ ಬೇಕಾದರೂ ಯಾವಾಗಲೂ ಎಲ್ಲರೂ ಬರುತ್ತಾರೆ. ಪ್ರವಾಹ ಬಂದಾಗ್ಗೆ ಗಿಡದ ಮೇರೆ ಜನ ಇದ್ದರು, ತಿನ್ನುವುದಕ್ಕೆ ಆಹಾರವಿಲ್ಲ, ಬಟ್ಟೆಯಿಲ್ಲ. ಇಂಥ ಕಷ್ಟದಲ್ಲಿದ್ದಾಗ್ಗೆ ಜನರಿಗೆ ಸಾಹಸದಿಂದ ಧೈರ್ಯದಿಂದ ತ್ಯಾಗ ಬುದ್ಧಿಯಿಂದ ಸಹಾಯ ಮಾಡಿದ ಕಲೆಕ್ಟರ್ ಆದಿರಾಜಯ್ಯ ಡಿ. ಎಸ್. ಪಿ. ವೀರಭದ್ರಯ್ಯ ಇವರನ್ನು ಪ್ರಶಂಸಿಸಬೇಕಾಗಿದೆ. ನೀರು ನುತ್ತುಗಟ್ಟಿದ ಪ್ರದೇಶದಿಂದ ಅತ್ಯಂತ ಸಾಹಸ ಪೂರ್ವಕ ಜನರನ್ನು ಪಾರುಮಾಡಿದ ಕಲ್ಲೂರ್ ಮುಂತಾದ ವ್ಯಕ್ತಿಗಳನ್ನು ಕರೆಸಿಕೊಂಡು ರಾಜ್ಯಪಾಲರಿಂದ ಅವರಿಗೆ ಸನ್ಮಾನ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಈಗ ಸರಕಾರದವರು ಒದಗಿಸಿರುವ ಪರಿಹಾರ ಸಾಲದು. ಏನೇನು ಸಹಾಯ ಮಾಡಲು ಶಕ್ಯವಿವೆಯೋ ಅದನ್ನೆಲ್ಲವನ್ನೂ ಮಾಡಬೇಕಾಗಿದೆ. ಸರಕಾರವನ್ನು ಟೀಕಿಸಬೇಕೆಂದು ಇದನ್ನು ಹೇಳುತ್ತಿಲ್ಲ. ಪ್ರವಾಹ ಪರಿಹಾರ ನಿಧಿಗೆ ಎಲ್ಲರೂ ಸಹಾಯ ಮಾಡುವುದು ಕರ್ತವ್ಯ. ಅರ್ಧ ತಿಂಗಳ ಪಗಾರ ಕೊಟ್ಟರೆ ಸಾಲದು. ಈ ಸಭೆಯ ಪ್ರತಿಯೊಬ್ಬ ಸದಸ್ಯರೂ ಒಂದು ತಿಂಗಳ ಸಂಬಳ ಕೊಡುವುದು ಉಚಿತ. ನನ್ನ ಒಂದು ತಿಂಗಳ ಸಂಬಳ 250 ರೂಪಾಯಿ ಇವೊತ್ತಿನ ದಿವಸವೇ ನಮ್ಮ ವಿರೋಧ ಪಕ್ಷದನಾಯಕರ ಕೈಯಲ್ಲಿ ಕೊಟ್ಟುಬಿಡುತ್ತೇನೆ. ಇದೇ ರೀತಿಯಾಗಿ ಎಲ್ಲರೂ ಸಹಾಯ ಮಾಡಬೇಕೆಂದು ಬಹಳ ಕಳಕಳಿಯಿಂದ ಕೈಮುಗಿದು ವಿನಂತಿ ಮಾಡಿಕೊಳ್ಳುತ್ತೇನೆ. ನೊಂದ ಜನರಿಗೆ ಸಹಾಯ ಮಾಡಲು 250 ರೂಪಾಯಿ ಪ್ರತಿಯೊಬ್ಬ ಸದಸ್ಯರೂ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ಹಣ ನೊಂದಜನರಿಗೆ ಸರಿಯಾಗಿ ಮುಟ್ಟಲು ವ್ಯವಸ್ಥೆ ಮಾಡುವುದಕ್ಕೆ ಒಂದು ಸಮಿತಿಯನ್ನು ರಚಿಸಿ ಅದರಲ್ಲಿ ವಿರೋಧಪಕ್ಷದ ಸದಸ್ಯರನ್ನೂ ಸೇರಿಸಿಕೊಳ್ಳಬೇಕು. ಯಾರು ಯಾರು ನೊಂದಿದ್ದಾರೆ, ಯಾರು ಕಷ್ಟದಲ್ಲಿದ್ದಾರೆ, ಯಾವ ಕೂಸು ಅಪ್ಪ ಅವ್ವ ಕಳೆದು ಕೊಂಡು ಪರದೇಶಿಯಾಗಿದೆ ಎಂಬುದನ್ನು ಪ್ರತ್ಯಕ್ಷನೋಡಿ ಅಂಥವರೆಲ್ಲರಿಗೂ ಕೂಡಲೇ ಸಹಾಯ ಒದಗಿಸಬೇಕು.

ಈಗ ಸಭೆಯನ್ನು ತಾವು 29ನೆಯ ತಾರೀಖು ಮುಂದುವರಿಸುತ್ತೀರೆಂದು ಕೇಳುತ್ತೇನೆ. 29ಕ್ಕೆ ಮುಂದುವರಿಸಿ ಈಗ ಮಾಡತಕ್ಕದ್ದು ಏನು ? ಈಗ ಏನಿದೆ ? ಎಲ್ಲ ಮುಗಿದು ಹೋಗಿದೆ. ಪ್ರವಾಹದಿಂದ ನೊಂದವರಿಗೆ ಅನ್ನ, ಬಟ್ಟೆ, ಇರಲು ಸ್ಥಳ, ಇಲ್ಲ. ತಕ್ಷಣ ಕಲೆಕ್ಟರಿಗೆ, ಸಂಬಂಧಪಟ್ಟ ಅಧಿಕಾರಿಗಳಿಗೆ ಫೋನ್‌ನಿಂದ, ಕಾರನ್ನೂ ಕಳಿಸಿ, ಬೇಕಾದ ಸಹಾಯವನ್ನೊದಗಿಸುವ ವ್ಯವಸ್ಥೆ ಮಾಡಬೇಕಾದ್ದು ಅತ್ಯವಶ್ಯವಿದೆ. 19 ಜನ ಮಂತ್ರಿಗಳು, ಅಧ್ಯಕ್ಷರು, ಉಪಾಧ್ಯಕ್ಷರು ಎಲ್ಲರೂ ಪ್ರವಾಸಮಾಡಿ ನೊಂದವರಿಗೆ ಪರಿಹಾರವನ್ನು ದೊರಕಿಸಲು ಪ್ರಯತ್ನ ಮಾಡಬೇಕಾಗಿತ್ತು. ಹಾಗೆಮಾಡಲಿಲ್ಲ. ಈಗ ಸಭೆಯನ್ನು ಮುಂದುವರಿಸಬೇಕು ಎಂದು ಮಾಡುತ್ತಿರುವುದರಿಂದ ಜನ ಏನು ಹೇಳುತ್ತಾರೆ ಎಂಬುದನ್ನು ನಾನೀಗ ಹೇಳುತ್ತಿದ್ದೇನೆ. ಆಗಸ್ಟ್ 20 ನೆಯ ತಾರೀಖಿನೊಳಗಾಗಿ ಕಾಂಗ್ರೆಸ್ ಟಿಕೆಟ್ ಕೊಡುವುದರ ಸಲುವಾಗಿ ಅಪ್ಲಿಕೇಷನ್ ಹಾಕಿಕೊಳ್ಳಬೇಕಾಗಿದೆ. ಅದಕ್ಕೋಸ್ಕರ ಊರಿನಲ್ಲಿ ಮಾತನಾಡಿಕೊಂಡು ತಮ್ಮ ಕೆಲಸಕಾರ್ಯಗಳಿಗೆ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ಈ ರೀತಿ ಸಭೆಯನ್ನು ಮುಂದುವರಿಸಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆಂದು ಜನ ಆಡಿಕೊಳ್ಳುತ್ತಿದ್ದಾರೆ. ಮಾನ್ಯ ಮಂತ್ರಿಗಳು ನನ್ನ ಜೊತೆ ಬರುವುದಾದರೆ ಅವರು ತಲೆಗೆ ಹೇಟ ಹಾಕಿಕೊಂಡು ವೇಷ ಬದಲಿಸಿ ಬಂದರೆ ನಾನು ಅವರನ್ನು ಅಡ್ಡಾಡಿಸಿಕೊಂಡು ಬರುತ್ತೇನೆ. ಜನ ಏನು ಹೇಳುತ್ತಾರೆಂದು ಅವರೇ ತಿಳಿದುಕೊಳ್ಳಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.— ಮುಖಕ್ಕೆ ಬುರುಕ ಹಾಕಿಕೊಂಡು ಹೋಗಬಹುದು.

ಶ್ರೀ ಕಡಿದಾಳ್ ಮಂಜಪ್ಪ.—ಅಷ್ಟು ಹೇಡಿತನದ ಬಾಳ್ವೆಯನ್ನು ಯಾವತ್ತೂ ಮಾಡಿಲ್ಲ. ಇನ್ನೂ ಮುಂದೆಯೂ ಮಾಡಬೇಕಾಗಿಲ್ಲ.

ಶ್ರೀ ಬಿ. ಕೆ. ನಾಗೂರ್.—ಹಿಂದೆ ಮುಖ್ಯ ಮಂತ್ರಿಗಳಾಗಿದ್ದವರು, ಬಹಳ ಜನರಿಗೆ ಬೇಕಾದವರು. ಥಟ್ಟನೆ ನಿಮ್ಮನ್ನು ಗುರುತು ಹಿಡಿಯುತ್ತಾರೆ. ಅದಕ್ಕಾಗಿ ವೇಷ ಬದಲಿಸಬೇಕೆಂದು ಹೇಳಿದೆ. ನಿಮ್ಮ ಫೋಟೋ ವ್ಯಂಗ್ಯ ಚಿತ್ರಗಳಲ್ಲಿ ಬಹಳ ಚೆನ್ನಾಗಿ ಕಾಣಿಸುತ್ತದೆ. ನಿಮ್ಮನ್ನು ಎಲ್ಲರೂ ಗುರುತು ಹಿಡಿಯುತ್ತಾರೆ

ಉಪಾಧ್ಯಕ್ಷರು.—ದಿನವೆಲ್ಲ ಇದೇ ಭಾಷಣವನ್ನು ಮಾಡುತ್ತಿರಾ ?

ಶ್ರೀ ಬಿ.ಕೆ. ನಾಗೂರ್.—ಈಗಾಗಲೇ ಕನ್ನಡ ಸಿನಿಮಾ ನಟರು ಕೂಡ ಇದರ ಬಗ್ಗೆ ಸಹಾಯ ಮಾಡಲು ಮುಂದೆ ಬಂದಿರುವುದಕ್ಕಾಗಿ ನಾವು ಅವರನ್ನು ಅಭಿನಂದನೆ ಮಾಡಬೇಕಾಗಿದೆ.

ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಲ್ಲಿ ಒಂದು ವಿಷಯವನ್ನು ಮಾತ್ರ ಕೇಳಿಕೊಳ್ಳುತ್ತೇನೆ. ಬೇರೆ ಕಾರಣಾಂತರದಿಂದ ಈ ಸಭೆಯನ್ನು ಮುಂದುವರಿಸಬಾರದು. ಸರ್ಕಾರದಲ್ಲಿ ನೊಂದ ಜನರಿಗೆ ಸಹಾಯಮಾಡಲು ದುಡ್ಡು ಇರಲಿಲ್ಲವೆಂದರೆ, ಸಾಲ ಕೇಳಿ, ಭಿಕ್ಷೆ ಬೇಡಿ ಅಥವಾ ಎಲ್ಲಿಂದಾದರೂ ತೆಗೆದುಕೊಂಡು ಬಂದು ಜನರನಂಕಷ್ಟಗಳನ್ನು ನಿವಾರಣೆ ಮಾಡಬೇಕು. ಇದರಿಂದ ಬಹಳ ಒಳ್ಳೆಯದಾಗುತ್ತದೆ. ಜೋಳಿಗೆ ಹಾಕಿಕೊಂಡು ಹೋಗಿ ಕೇಳಿದರೆ ನಮಗೆ ಸಾಕಷ್ಟು ದಾನಿಗಳಿದ್ದಾರೆ. ಇಲ್ಲಿ ಕುಳಿತುಕೊಂಡು ಏನು ಮಾಡಿದರೂ ಆಗುವುದಿಲ್ಲ. ಇಲ್ಲರುವ ಪ್ರತಿಯೊಬ್ಬ ಮಾನ್ಯ ಸಭಾ ಸದಸ್ಯರೂ 250 ರೂಪಾಯಿಗಳನ್ನು ಕೊಡುತ್ತಾರೆನ್ನುವ ಆತ್ಮವಿಶ್ವಾಸ ನನಗಿದೆ. ಮಂತ್ರಿಗಳೂ ಒಂದೊಂದು ತಿಂಗಳ ಪಗಾರವನ್ನು ಕೊಟ್ಟರೆ ಒಟ್ಟು ನುಮಾರು ಒಂದು ಲಕ್ಷ ರೂಪಾಯಿ ಆಗುತ್ತದೆ. ಇದನ್ನು ವಿಧಾನಸಭೆಯ ಪರಿಹಾರ ನಿಧಿ ಎಂದು ಕರೆಯಬಹುದು. ಅನಂತರ ಜೋಳಿಗೆಯನ್ನು ಹಾಕಿಕೊಂಡು ಹೋಗಿ ದುಡ್ಡು ಸಂಪಾದನೆ ಮಾಡಿಕೊಂಡು ಬನ್ನಿ. ಯಾರೂ ಇಲ್ಲವೆನ್ನುವುದಿಲ್ಲ. ಈ ಹಣವನ್ನು ಯಾರು ಕಷ್ಟದಲ್ಲದ್ದಾರೆಯೋ ಅವರಿಗೆ ಕೊಟ್ಟು ಸಹಾಯಮಾಡಿ.

ಬಿಜಾಪುರ ಜಿಲ್ಲೆಯಲ್ಲಿ 8-10 ಹಳ್ಳಿಗಳಲ್ಲಿ ನೀರು ಪ್ರವೇಶಿಸಿದೆ. ಭೀಮಾನದಿಗೆ ಒಂದು ಸೇತುವೆಯನ್ನು ಕಟ್ಟಿಸಿದರು. ಇದರ ಮೇಲೆ ನಾಲ್ಕೈದು ಮಂದಿ ಎತ್ತರ ಆಗುವಷ್ಟು ನೀರು ಹರಿಯಿತು. ಕರ್ಮ ಧರ್ಮ ಸಂಯೋಗದಿಂದ ಯಾರೂ ಜನ ನತ್ತಿಲ್ಲ. ಆದರೆ ತೊಂದರೆ ಮಾತ್ರ ಬಹಳವಾಗಿದೆ. ಈಗ ಅವರಿಗೆಲ್ಲ ಪರಿಹಾರ ಕೊಡಬೇಕು. ಶ್ರೀಮಾನ್ ಬನವೇಗೌಡರು ಮಾತನಾಡುವಾಗ ಕಾಫಿ, ಏಲಕ್ಕಿ ಮುಂತಾದ ತೋಟಗಳು ಹಾಳಾದುವು ಎಂದು ಹೇಳಿದ್ದನ್ನು ನೋಡಿದರೆ ಬಹಳ ವ್ಯಸನವಾಗುತ್ತದೆ. ನೀವು ಮಾಡಬೇಕಾದ ಕಾರ್ಯದಲ್ಲಿ ತಪ್ಪಿದರೆ ಅಥವಾ ನಿಧಾನ ಮಾಡಿದರೆ ನಿಮ್ಮ ಕರ್ತವ್ಯ ಲೋಪ

(ಶ್ರೀ ಬಿ. ಕೆ. ನಾಗೂರ್)

ವಾಗುತ್ತದೆ. ಹಾಗೆ ಮಾಡಬೇಡಿ ಎಂದು ಕಳಕಳಿಯಿಂದ ಹೇಳುತ್ತೇನೆ. ಈ ಸಂದರ್ಭದಲ್ಲಿ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಒಬ್ಬ ಆಫೀಸರನ ಮನೆಯಲ್ಲಿ ಒಬ್ಬ ನೌಕರದಾರನಿದ್ದ. ಮನೆಯೊಳಗೆ ಅಮ್ಮ ಅವರು ಹೇಳಿದರು ತಲೆಗೆ ಏನೋ ಏಟು ಬಿದ್ದಿದೆ ಸಾಹೇಬರಿಗೆ ಹೇಳಿ ಕರೆದುಕೊಂಡುಬಾ ಎಂದು. ಅವನು ಆಫೀಸರ ಹತ್ತಿರ ಹೋಗಲು, ಅವರೊಡನೆ ಮಾತನಾಡುತ್ತಿದ್ದವರು ಹೊರಗುವವರೆಗೂ ಹೊರಗೇನಿಲ್ಲು ಎಂದು ಅವರು ಹೇಳಿದರು. ಅವನು ಹಾಗೆಯೇ ಹೊರಗೆ ಕುಳಿತ.

ಒಳಗಿದ್ದವರೆಲ್ಲ ಹೊರಟುಹೋದಮೇಲೆ ಅಮ್ಮ ಅವರು ಹೇಳಿದುದನ್ನು ತಿಳಿಸಿದ. ಇನ್ನೊಂದು ದಿನ ಮನೆಗೆ ಬೆಂಕಿ ಹತ್ತಿತು. ಒಳಗಡೆ ಆಫೀಸಿನಲ್ಲಿ ಬಹಳ ಜನ ಕುಳಿತಿದ್ದರು. ನೌಕರನು ಹೊರಗಡೆಯೇ ಕುಳಿತು ಒಳಗಿದ್ದ ಜನರೆಲ್ಲ ಹೊರಟು ಹೋದಮೇಲೆ ಒಳಗಡೆ ಬಂದು ಮನೆಗೆ ಬೆಂಕಿ ಹತ್ತಿದೆ ಎಂದು ತಿಳಿಸಿದ. ಅಷ್ಟರಲ್ಲಿ ಮನೆಯೆಲ್ಲ ಸುಟ್ಟು ಹೋಗಿತ್ತು. ಆಫೀಸರನು ಏಕೆ ಮೊದಲೇ ತಿಳಿಸಲಿಲ್ಲ? ಯಾರನ್ನಾದರೂ ಕಳಿಸುತ್ತಿದ್ದೆ, ಇಂಥ ಸಂದರ್ಭಗಳಲ್ಲಿ ಬಾಯಿಬಡಕೊಂಡು ಬರಬೇಕೆಂದು ಹೇಳಿದ. ಅದಕ್ಕೆ ಒಳಗೆ ಯಾರಾದರೂ ಇದ್ದರೆ ಬರಬಾರದೆಂದು ಹೇಳಿದ್ದರೆಂದು ತಿಳಿಸಿದ. ಮತ್ತೊಂದು ಸಲ ಹೆಂಡತಿ ಗಂಡು ಮಗುವನ್ನು ಹೆತ್ತಳು. ಆಗ ನೌಕರನು ಬಾಯಿ ಬಡಕೊಳ್ಳುತ್ತ ಬಂದು ಗಂಡು ಮಗು ಹುಟ್ಟಿದೆ ಎಂದು ತಿಳಿಸಿದ. ಗಂಡುಮಗು ಹುಟ್ಟಿದ್ದಕ್ಕೆ ಬಾಯಿ ಬಡಕೊಂಡು ಅಳುತ್ತಾ ಬರುತ್ತಾರೇನೋ, ನಗುತ್ತಾ ಹೇಳಬೇಕು ಎಂದರು. ಆಗಲಿ ಸ್ವಾಮಿ ಎಂದ. ಆಫೀಸರಿಗೆ ಒಬ್ಬ ವೃದ್ಧ ತಂದೆ ಇದ್ದರು. ಸ್ವಲ್ಪ ಕಾಲದನಂತರ ಅವರು ಸತ್ತರು. ಆಗ ಅವನು ನಗುತ್ತ ಬಂದು ಅವರ ತಂದೆಯವರು ಸತ್ತ ಸಮಾಚಾರವನ್ನು ಹೇಳಿದ. ಅದೇರೀತಿ ಈಗ ನಮ್ಮ ಸಭೆಯನ್ನು 19ನೆಯ ತಾರೀಖಿಗೆ ಬಂದ್ ಮಾಡುವುದನ್ನು ಬಿಟ್ಟು 29ನೆಯ ತಾರೀಖಿಗೆ ಬಂದ್ ಮಾಡಬೇಕು ಎಂದು ಹೇಳುವುದರಲ್ಲಿ ಅರ್ಥವಿಲ್ಲ. ನಾವೆಲ್ಲರೂ, ವಿರೋಧ ಪಕ್ಷದವರೂ ಮತ್ತು ಕಾಂಗ್ರೆಸ್ ಪಕ್ಷದವರೂ ಕೂಡಿ ಭೇದಭಾವವಿಲ್ಲದೆ ನಮ್ಮ ಒಂದು ತಿಂಗಳ ಸಂಬಳ ಎಂದರೆ 250 ರೂಪಾಯಿಗಳನ್ನು ಕೊಡಬೇಕು. ನಾನು ನಮ್ಮ ನಾಯಕರಾದ ಶ್ರೀಮಾನ್ ಮಲ್ಲಾರಾಧ್ಯರ ಮುಖಾಂತರ ತಮಗೆ 250 ರೂಪಾಯಿಗಳನ್ನು ಕೊಡುತ್ತೇನೆ. ವಿಧಾನಸಭಾ ಸದಸ್ಯರ ಪರಿಹಾರನಿಧಿ ಎಂದು ಒಂದು ನಿಧಿಯನ್ನು ಮಾಡಬೇಕಾಗಿದೆ. ಪ್ರವಾಹ ಪರಿಹಾರ ನಿಧಿಗೆ "ಸಂಯುಕ್ತ ಕರ್ನಾಟಕ"ವು ಸಾಕಷ್ಟು ಹಣವನ್ನಿತ್ತಿದೆ. ಇದನ್ನೆಲ್ಲ ಪ್ರವಾಹದಲ್ಲಿ ನೊಂದವರಿಗೆ ಸಹಾಯ ಮಾಡಲು ವಿನಿಯೋಗಿಸಬಹುದು. ಕಟ್ಟ ಕಡೆಗಾದರೂ ನನ್ನ ಜಿಲ್ಲೆಯ ಕಳವಳವನ್ನು ಹೇಳಿಕೊಳ್ಳುವುದಕ್ಕೆ ಅವಕಾಶ ದೊರಕಿಸಿಕೊಟ್ಟ ಸಭಾಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

*Sri K. MALLAPPA (Mercara).—Mr. Speaker, Sir, my hon'ble friend Sri Karumbayya has given a description of the devastation caused by rain in the District of Coorg. Perhaps in the history of Coorg there had not been such heavy rains. The damage caused to property is simply colossal, but I am surprised to note from the statement of the Hon'ble Minister for Revenue that the loss of property and the damage caused to lands including coffee estate is reported to be 1,000 acres. On the 15th of this month we had a District Relief Committee meeting at Mercara which was attended not only by hon'ble members representing the district in this Assembly but also by the Deputy Commissioner, the Tahsildars, the Revenue Officers and the Presidents of the 3 Taluk Boards of the District.

They had brought with them the reports of the damage caused in their respective areas. It was estimated at that meeting, rather conservatively, that the damage caused to wet lands alone was to the extent of 28 thousand acres of land, 1,000 acres in Somwarpet taluk, 7 to 9 thousand in Mercara and 18,000 in Virajpet taluk. This figure does not take into account the enormous loss caused to plantation areas like coffee, cardamom and orange. There has been considerable damage to the standing crops in respect of plantations. It was estimated at that meeting that a loss of 30 to 40 per cent had been caused to those crops. We had so far 170 inches of rain and ordinarily we should have had only about 70 inches and we have yet to cover about 2 or 3 months more because the rainy season is not yet over. Hills have moved down, rivers have abandoned their course and they have got their way across rich paddy fields. The loss is enormous indeed. Of course some relief work has begun, Government is doing something, private organisations are doing their very best, the Red Cross of the district has generously come forward and the three taluk boards have been doing their best. But this sort of relief provided by these organisations will not help the people there. It may at best help the people tide over the situation temporarily or immediately but the real problem in our district is how to repair and reclaim this vast area, 28 thousand acres, so that it can be brought under cultivation. We had

estimated at this meeting, to which I made a reference earlier, that the Government should advance taccavi loans at least to the extent of 7 or 8 lakhs. That is the barest minimum. I request on the floor of this Hose that the Hon'ble Minister should make a provision immediately to sanction an amount to the extent of 8 lakhs to be advanced to the ryots who are affected by the floods and whose lands have been damaged. In this regard I would like to appeal to the Minister that whatever help is extended to the people by way of loan should be immediate and it should be adequate. There is no use of giving a loan which is now required, some months later or if adquate relief is not provided, the help rendered will not be of any use to the man who has suffered the damage. I request the Hon'ble Minister to direct the officers not to sit tight on their desks. They must be directed to go to the places where damages have occurred to meet the affected people, assess the damages on the spot and whatever loan is needed, sanction immediately and make arrangements to pay that amount on the spot. This should be done and it can be done. So far as the quantum of loan is concerned, I am told a maximum of Rs. 1,000 has been fixed. In some cases this is inadequate. Hills have come down and rivers have washed away earth and in some places deposited mounds of sand. Removal of sand and restoration of land will involve considerable expenditure and unless the amount is given sufficiently the damage in large proportion cannot be restored. Therefore I request the Government that in appropriate cases the limit placed may be raised in order to provide adequate relief.

In this regard I have to point out that in a number of cases people have already taken some taccavi loans. Merely on the ground that people have already taken loans and are indebted to Government, further loans should not be refused. This is a case where the people require all help from Government and this unprecedented calamity was not the doing of the people. It has overtaken them and they have been subjected to great misfortunes. Therefore, Government should take some pity on these people and even though these people have already been indebted to Government, they should be given further loans so that they would be in a position to reclaim their land and bring them under cultivation.

I know that the loss suffered by the people is so stupendous that the 7 or 8 lakhs which I have proposed and which the District Relief Committee has requested the Government to sancation, may not meet the requirements of the people of the district fully. Arrangements should be made to harness the co-operative societies of the district and then adquate financial resources should be placed at their disposal so that these societies may advance to their members both by way of short-term and long-term loans to solve the difficulties and to tide over the situation now created on account of rain havoc.

So far as communications are concerned, in the statement placed before this House by the Hon'ble Minister, reference has been made only to the main communications, that is, between Mercara and Mangalore and Mercara and Mysore. Bagmandla, an important place and a place of pilgrimage and hobli centre, has been completely isolated. There is absolutely no communication whatever. There are many interior places in the district which have become completely isolated and inaccessible. I do not know how life is going on there and how the people are managing to live there. Things have become costly. I request the Government to take immediate action at least to repair some of these important communications so that though it may not be possible to make vehicles move on the road, at least some country vehicles and pedestrians could move about.

Otherwise, any help that is expected to be rendered to these people may not reach them and they will not be helped out of their plight. I do not wish to take much time because my honourable frends have already referred to various matters. But the situation now

(SRI K. MALLAPPA)

created does require both short-range and long-range measures and our friend Sri Mallaradhya has suggested as to what should be long-range measures and I hope that the Government will take appropriate action to see that if it is not possible to completely avert such a situation, in the future, at least its effect would be reduced.

With these few words, I thank the Chair for having given me an opportunity to speak.

ಶ್ರೀ ಜಿ. ಎಂ. ಚಿನ್ನಸ್ವಾಮಿ (ಬಿಳಿಗಿರಿ).—ಸ್ವಾಮಿ, ಎಲ್ಲಾ ಕಡೆಗಳಲ್ಲಿಯೂ ಪ್ರವಾಹ ಏಕೆ ಬರುತ್ತದೆ ಎನ್ನುವುದನ್ನು ಯೋಚನೆ ಮಾಡಿದರೆ ನನಗನಿಸುವುದು ಹೋದ ವರ್ಷ ನಮ್ಮ ಮಾನ್ಯ ಮಂತ್ರಿಗಳಾದ ಶ್ರೀಮಾ ಮಂಜಪ್ಪನವರು ಪೂಜೆ ಮಾಡಿಸಿದುದೇ ಕಾರಣವೋ ಏನೋ ಎಂದು ತೋರುತ್ತದೆ. ಐದು ವರ್ಷಗಳ ಹಿಂದಿನಿಂದ ಮಾಡದೇ ಇದ್ದ ಪೂಜೆಯನ್ನು ಶ್ರೀಮಾ ಮಂಜಪ್ಪನವರು ಮಾಡಿಸಿದುದರಿಂದ ಅದು ಈಗ ದೇವರಿಗೆ ತಲುಪಿರಬಹುದು. ಅದರಿಂದಾಗಿ ಅತಿವೃಷ್ಟಿಯಾಗಿ ಮಳೆ ಬಂದು ಈ ರೀತಿಯಾಗಿ ಪ್ರವಾಹಗಳು ಬಂದಿವೆಯೇನೋ ಎಂದು ನನಗನಿಸುತ್ತದೆ. (ನಗು)

ನಮ್ಮ ತಾಲ್ಲೂಕಿನಲ್ಲಿ ಕಪಿನಿ ನದಿಯಲ್ಲಿ ಪ್ರವಾಹ ಬಂದಿದೆ ಮತ್ತು ಟಿ.-ನರಸೀಪುರದ ತಾಲ್ಲೂಕಿನಲ್ಲಿ ಕಪಿನಿ ಮತ್ತು ಕಾವೇರಿ ಸಂಗಮವಾಗುತ್ತದೆ, ಇವೆರಡು ನದಿಗಳಲ್ಲಿಯೂ ಪ್ರವಾಹ ಬಂದು ಜನಕ್ಕೆ ತೊಂದರೆಯಾಗಿದೆ. ಇದರ ಬಗ್ಗೆ ಯಾವ ಯಾವ ಕಡೆಗಳಲ್ಲಿ ರಿಲೀಫ್ ವರ್ಕುಗಳನ್ನು ಯಾವ ರೀತಿಯಾಗಿ ತೆಗೆದುಕೊಂಡಿದ್ದಾರೆ ಎನ್ನುವುದರ ಪಟ್ಟಿಯೊಂದನ್ನು ನಮಗೆ ಕೊಟ್ಟಿದ್ದಾರೆ. ನಮ್ಮ ಕಡೆ ಏನಾಗಿದೆ ಎಂದರೆ ಕೆಲವು ಜಮೀನುಗಳಲ್ಲಿ ಹಾಕಿದ ಬತ್ತದ ಪೈರುಗಳೇ ಇಲ್ಲ. ವ್ಯವಸಾಯ ಇಲಾಖೆಯವರನ್ನು ಕೇಳಿದರೆ ಬೀಜದ ಬತ್ತ ಇಲ್ಲ ಎಂದು ಹೇಳುತ್ತಿದ್ದಾರೆ. ಈ ಕಡೆಗಳಲ್ಲಿ ಸರಕಾರ ಮನಸ್ಸುಮಾಡಿ ಬೀಜದ ಬತ್ತವನ್ನು ಒದಗಿಸಿ ಕೊಡಬೇಕು. ನಮ್ಮ ತಾಲ್ಲೂಕಿನ ಎರಡು ಗ್ರಾಮಗಳಲ್ಲಿ ಮನೆಗಳು ಹಾಳಾಗಿ ಹೋಗಿವೆ. ಅದರಲ್ಲೆಲ್ಲಾ ಹರಿಜನರ ಮತ್ತು ನಾಯಕರ ಪಂಗಡದ ಜನಕ್ಕೆ ತುಂಬಾ ತೊಂದರೆಯಾಗಿದೆ. ಅದರಿಂದ ನಾನು ಹೇಳುವುದು, ಶ್ರೀಮಂತರಿಗೆ ಸಹಾಯ ಮಾಡದೇ ಹೋದರೂ ಪರವಾಯಿಲ್ಲ, ಅತಿ ಬಡವರಾಗಿರತಕ್ಕ ಈ ಜನಕ್ಕೆ ಬಡ್ಡಿ ಇಲ್ಲದೆ ಸಾಲವಾಗಿ ಹಣವನ್ನು ಆದಷ್ಟೂ ಜಾಸ್ತಿಯಾಗಿ ಕೊಡಬೇಕು ಮತ್ತು ತಕಾವಿ ಸಾಲಗಳನ್ನು ಕೊಡುವ ರೀತಿಯಲ್ಲಿ ಈ ಸಾಲವನ್ನು ಕೊಟ್ಟು ಅವರು ವ್ಯವಸಾಯ ಮಾಡುವುದಕ್ಕೆ ಸಹಾಯ ಮಾಡಬೇಕು. ಈ ರೀತಿಯಾಗಿ ಬೇಗನೆ ಈಗ ಸಹಾಯ ಮಾಡಿದರೆ ಈ ಜನ ತಮ್ಮ ಜಮೀನಿನಲ್ಲಿ ಕೆಲಸವನ್ನು ಆರಂಭ ಮಾಡಲು ಅನುಕೂಲವಾಗುತ್ತದೆ. ಇನ್ನು ಇಪ್ಪತ್ತು ದಿನಗಳಲ್ಲಿ ಇವರು ನಾಟಿ ಹಾಕಬೇಕಾಗಿದ್ದರೆ ಈ ಜನಕ್ಕೆ ಬಡ್ಡಿ ಇಲ್ಲದ ಸಾಲವನ್ನು ಕೊಡಿ ಮತ್ತು ಅದನ್ನು ಐದು ವರ್ಷಗಳಲ್ಲಿ ಕಂತುಗಳ ಮೂಲಕ ಅನುಕೂಲ ಮಾಡಿ ಕೊಡಬೇಕಾದುದು ಅತ್ಯಗತ್ಯ. ರ್ಯಾಂಡು ಇಂಪ್ರೂವ್ ಮೆಂಟು ಲೋನು ಎಂದು ಈಗ ಸರಕಾರದವರು ಕೊಡುತ್ತಿರುವುದು ಸರಿಯಾಗಿಲ್ಲ. ಇದರಿಂದ ಕೊಡುವ ದುಡ್ಡು ನೇರವಾಗಿ ರೈತನಿಗೇ ಸಿಕ್ಕುವಂತೆ ತಕ್ಕ ವ್ಯವಸ್ಥೆ ಮಾಡಬೇಕು. ತಹಶೀಲು ದಾರರಿಗೇ ಈ ಕೆಲಸವನ್ನು ವಹಿಸಿದರೆ ಅದು ಸರಿಯಾಗಿರುವುದಿಲ್ಲ. ಅವರಿಗೆ ಈಗಲೇ ಎಷ್ಟೋ ಕೆಲಸಗಳಿರುತ್ತವೆ. ಆದುದರಿಂದ ಇದಕ್ಕಾಗಿಯೇ ಪ್ರತ್ಯೇಕವಾಗಿ ಒಬ್ಬ ಅಧಿಕಾರಿಗಳನ್ನು ನೇಮಿಸಿ ಈ ಕೆಲಸವನ್ನು ಮಾಡಲು ಏರ್ಪಾಡು ಮಾಡಬೇಕು. ಮನೆಗಳನ್ನು ಕಟ್ಟಿಕೊಳ್ಳುವುದಕ್ಕಾಗಿ ಈಗ 300 ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಇದು ಏನೇನೂ ಸಾಲದು. ಇದರಲ್ಲಿ ಒಂದು ಮನೆಯನ್ನು ಹೇಗೆಕಟ್ಟುವುದಕ್ಕೆ ಸಾಧ್ಯ? ಇದನ್ನು ಸ್ವಲ್ಪ ಹೆಚ್ಚು ಮಾಡಬೇಕು. ಕೊನೆಯಪಕ್ಷ 450 ರೂಪಾಯಿಗಳಷ್ಟನ್ನಾದರೂ ಕೊಡುವಂತೆ ಮಾಡಬೇಕು. ಈಗ ಕೊಡಬೇಕೆಂದು ಹೇಳಿರುವುದು ಬಹಳ ಕಡಮೆ ಇನ್ನು ಈಗ ನಮಗೆ ಮಂತ್ರಿಗಳು ಒದಗಿಸಿರುವ ಪಟ್ಟಿಯಲ್ಲಿ ನಮ್ಮ ಜಿಲ್ಲೆಯ ಬಗ್ಗೆ ಏನೇನು ಮಾಡಿದ್ದಾರೆ ಎನ್ನುವುದನ್ನು ಇಲ್ಲಿ ನಮ್ಮೂದಿನಲಲ್ಲ ಮೈಸೂರು ಡಿವಿಜನ್ನಿಗೆ 20 ಲಕ್ಷ ಸಹಾಯ ಧನ ಕೊಟ್ಟರೆ ಅದು ಎಲ್ಲಿ ಸಾಕಾಗುತ್ತದೆ? ಅದರಲ್ಲೂ ಕೊಳ್ಳೇಗಾಲ ಮತ್ತು ಟಿ.-ನರಸೀಪುರ ಈ ಎರಡು ತಾಲ್ಲೂಕುಗಳು ಬಹಳ ತೊಂದರೆಗೆ ಸಿಕ್ಕಿರುವ ಪ್ರದೇಶಗಳು. ಆದುದರಿಂದ ಈ ಸಹಾಯದ ಪ್ರಮಾಣವನ್ನು ಇನ್ನೂ ಸ್ವಲ್ಪ ಜಾಸ್ತಿ ಮಾಡಬೇಕು ಮತ್ತು ಸಾಲಗಳನ್ನು ಕೊಡುವಾಗ ಆದಷ್ಟು ಬೇಗನೆ ಕೊಡುವಂತೆ ಮಾಡಬೇಕು. ಎಷ್ಟೋ ಕಡೆಗಳಲ್ಲಿ ಜಮೀನಿನ ತುಂಬ ಮುರಳು ತುಂಬಿಕೊಂಡು ಹೋಗಿದೆ. ಇದರಲ್ಲಿ ಹೇಗೆ ಕೆಲಸ ಮಾಡಲು ಸಾಧ್ಯ! ಇನ್ನು ಹತ್ತು, ಹದಿನೈದು ದಿನಗಳಲ್ಲಿ ನಾಟೀ ಹಾಕಬೇಕಾಗಿದೆ. ಇದಕ್ಕೆ ತಕ್ಕ ಅನುಕೂಲತೆಗಳನ್ನು ಸರಕಾರ ಕಟ್ಟಿಸಿಕೊಟ್ಟು ಸಹಾಯ ಮಾಡಬೇಕು. ನಮ್ಮ ಜಿಲ್ಲೆಯಲ್ಲಿ ಎಷ್ಟು ಮನೆಗಳು ಹಾಳಾಗಿ ಹೋಗಿವೆ, ಎಷ್ಟು ಜಮೀನುಗಳು ಮುಳುಗಡೆಯಾಗಿವೆ ಅವುಗಳ ವಿವರಗಳೊಂದನ್ನೂ ಇಲ್ಲಿ ನಮಗೆ ಒದಗಿಸಿ ಕೊಟ್ಟಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ತಾವು ನಾನು ಕೊಟ್ಟಿರುವ ಪಟ್ಟಿಯನ್ನು ಓದಿಲ್ಲ. ಅದರಲ್ಲಿಯೇ ಎಲ್ಲ ವಿವರ ಇದೆ.

> "According to the reports available, nearly 3,000 houses are either damaged or destroyed in Mysore District. About 12,000 acres of agricultural lands are damaged. Heavy damages have also been caused to public properties like roads, bridges and irrigation works."…..

ಎಂದು ಅದರಲ್ಲಿ ಹೇಳಿದೆ.

ಶ್ರೀ ಜಿ. ಎಂ. ಚಿನ್ನಸ್ವಾಮಿ.—ಇಲ್ಲಿ ಎಷ್ಟು ಜಮೀನು ಹೋಗಿದೆ, ಎಷ್ಟು ಮನೆಗಳು ಹಾಳಾಗಿ ಹೋಗಿವೆ ಎನ್ನುವುದನ್ನು ತಿಳಿಸಲು ಅಲ್ಲಿರುವ ಜಿಲ್ಲಾಧಿಕಾರಿಗಳು ಏನು ಮಾಡುತ್ತಿದ್ದಾರೆ? ಸಬ್ ಡಿವಿಜನ್ನು ಅಧಿಕಾರಿಗಳು ಮತ್ತು ತಹಸೀಲುದಾರರು ಏನು ಮಾಡುತ್ತಿದ್ದಾರೆ, ಏನೇನು ಅನಾಹುತಗಳಾಗಿವೆ ಎನ್ನುವಂತಹ ಹೇಳಿಕೆಗಳೊಂದನ್ನೂ ಕೊಟ್ಟಿಲ್ಲ. ಆದುದರಿಂದ ಈಗ ಎಷ್ಟು ಮಟ್ಟಿಗೆ ಜನಗಳಿಗೆ ತೊಂದರೆಯಾಗಿದೆ ಮತ್ತು ಏನೇನು ಪರಿ

ಹಾಗೂ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನುವುದರ ಕಡೆಗೆ ಸರಕಾರ ಬೇಗನೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಂಡು ಸಹಾಯ ಮಾಡಬೇಕೆಂದು ಸರಕಾರವನ್ನು ಕೇಳುತ್ತೇನೆ. ಈ ರೀತಿ ನೊಂದವರ ಬಗ್ಗೆ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳಲು ಅನುಕೂಲವಾಗುವಂತೆ ನಾನು ನ ೨ ಒಂದು ತಿಂಗಳ ಸಂಬಳವನ್ನು ಈ ಪರಿಹಾರ ನಿಧಿಗಾಗಿ ಕೊಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ ಮತ್ತು ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು .ವಂದಿಸಿ ನನ್ನ ಈ ನಾಲ್ಕು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

*ಶ್ರೀ ಕೆ. ಎಂ. ದೇವಯ್ಯ (ಪೆರಿಯಾಪಟ್ಟಣ).— ಅಧ್ಯಕ್ಷರೇ, ನಾನು ಈ ವಿಚಾರದಲ್ಲಿ ಹೆಚ್ಚು ಮಾತನಾಡುವುದಿಲ್ಲ. ನನ್ನ ಸ್ನೇಹಿತರಾದ ಶ್ರೀಮಾಚಮಲ್ಲಪ್ಪನವರು ಎಲ್ಲ ವಿಚಾರಗಳನ್ನೂ ಮಾತನಾಡಿದ್ದಾರೆ. ನಾನು ಹಳ್ಳಿಯಲ್ಲಿ ವಾಸ ಮಾಡುವವನು; ಮತ್ತು ನಾನು ಹಳ್ಳಿಯ ರೈತ. ಮುಖ್ಯವಾಗಿ ಹಳ್ಳಿಗಳಿಗೆ ಏನು ಆಗಬೇಕು, ಏನು ಆವಶ್ಯವಾಗಿಬೇಕು ಎಂಬುದನ್ನು ವಿಚಾರಮಾಡಬೇಕು. ಕೊಡಗಿನಲ್ಲಿ ಈ ತಿಂಗಳು 17 ಮತ್ತು 18 ನೆಯ ತಾರೀಖುಗಳಲ್ಲಿ ಎಷ್ಟು ನಷ್ಟವಾಗಿದೆ ಎಂಬುದನ್ನು ಯಾರೂ ಆ ದಿವಸವೇ ಅಂದಾಜು ಮಾಡಿ ಹೇಳುವುದಕ್ಕೆ ಆಗುತ್ತಿರಲಿಲ್ಲ ಪ್ರತಿಯೊಂದು ಗ್ರಾಮದ ರಸ್ತೆಗಳು ತುಂಡು ತುಂಡಾಗಿದ್ದರೂ ಆ ರಸ್ತೆಗಳ ಚಿಕ್ಕ ಚಿಕ್ಕ ದಾರಿಗಳೇ ಗೊತ್ತಾಗದೇ ಇರುತ್ತಿತ್ತು. ಆದುದರಿಂದ ನಷ್ಟ ಕೊಡಗಿನಲ್ಲಿ ಎಷ್ಟು ನಷ್ಟವಾಗಿದೆ ಎಂಬುದನ್ನು ಹೇಳುವುದಕ್ಕೆ ಆ ದಿವಸ ಸಾಧ್ಯವಾಗುತ್ತಿರಲಿಲ್ಲ. 17 ನೆಯ ತಾರೀಖು ನನಗೆ ಹೊಳೆದಾಟಿ ಹೋಗುವುದಕ್ಕೆ ಆಗಲಿಲ್ಲ. ಡೆಪ್ಯುಟಿ ಕಮೀಷನರ್ ಅವರಿಗೆ ಬಂದಿದ್ದ ವರದಿಯನ್ನು ನನಗೆ ತೋರಿಸಿದರು. ಅದರಮೇಲೆ ಅಂದಾಜು ಮಾಡಿದ್ದರಿಂದ 28 ಸಾವಿರ ಏಕರೆ ನಾಶವಾಗಿದೆ ಎಂದು ಆ ವರದಿಯಿಂದ ನನಗೆ ಗೊತ್ತಾಯಿತು. ಆದರೆ ಇಲ್ಲಿ ನಮ್ಮ ಮಂತ್ರಿಗಳು ಕೊಡಗಿನಲ್ಲಿ ನುಮಾರು ಒಂದು ಸಾವಿರ ಎಕರೆಯಷ್ಟು ನಷ್ಟವಾಗಿದೆ ಎಂದು ಹೇಳುತ್ತಾರೆ. ಆ ಅಂಕಿ ಅಂಶ ಅವರಿಗೆ ಯಾವ ರೀತಿ ಸಿಕ್ಕಿದುವೋ ನನಗಂತೂ ಗೊತ್ತಾಗಲಿಲ್ಲ. ಮಂತ್ರಿಗಳು ನಮ್ಮ ಜಿಲ್ಲೆಗೆ ಆರು ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ; ಡೆಪ್ಯುಟಿ ಕಮಿಷನರ್ ಸಹ ಆರೀತಿಯಾಗಿ ಬರೆದಿದ್ದಾರೆಂಬುದಾಗಿ ಹೇಳಿದರು. ಈಗಾಗಲೇ ಒಂದು ಸಾವಿರ ಎಕರೆ ಅಲ್ಲಿ ನಷ್ಟವಾಗಿದೆ. ಬಹಳ ತ್ವರಿತವಾಗಿ ಅಲ್ಲಿನ ಬಡ ರೈತರಿಗೆ ರಿಲೀಫ್ ಈಗಾಗಲೇ ಆಗಬೇಕಾಗಿತ್ತು. ನಮ್ಮಲ್ಲಿರತಕ್ಕ ನದಿಗಳು ನಾಲ್ಕೈದು ದಿವಸಗಳಿಂದ ಒಂದೇ ಸಮನೆ ಹರಿಯುತ್ತಿವೆ. ಜನ ಯಾವ ರೀತಿ ಹೊಳೆ ದಾಟಿಕೊಂಡು ಹೋಗಬೇಕು, ಬರಬೇಕೆಂಬುದನ್ನು ವಿಚಾರಮಾಡಿ ನೋಡಬೇಕು. ಆದುದರಿಂದ ಈ ಬಗ್ಗೆ ನೂಕ್ತವಾದ ಕ ಲ ಸ ಕಾ ರ್ಯ ಗಳು ಬಹುಬೇಗನೆ ಆಗಬೇಕು. ತಾವು ಆರು ಲಕ್ಷವೇ ಅಲ್ಲ, 60 ಲಕ್ಷ ರೂ ಪಾ ಯಿ ಗ ಳ ನ್ನು ಕೊಟ್ಟರೂ ಈಗ ಪ್ರಯೋಜನವಿಲ್ಲ ನೂಕ್ತ ಪರಿಹಾರ ಕೊಡುವಬಗ್ಗೆ ನಿಧಾನ ಮಾಡುವ ಹಾಗೆಯೇ ಇಲ್ಲ. ಒಡನೆಯೇ ಅಲ್ಲಿಗೆ ಇವೊತ್ತೇ ಫೋನ್‌ಮಾಡಿ ಆರುಲಕ್ಷ ರೂಪಾಯಿಗಳನ್ನು ಕಳುಹಿಸಿ. ಇಷ್ಟುಮಾಡಿದರೆ ಮಾತ್ರ ನಮ್ಮ ರೈತರು ಬದುಕುತ್ತಾರೆ. ನನ್ನ ಕ್ಷೇತ್ರ ದಲ್ಲಿಯೇ ಅನೇಕ ಜನರು ಮನೆ ಮಠಗಳನ್ನು ಕಳೆದು ಕೊಂಡಿದ್ದಾರೆ. 35 ಮನೆಗಳು ನಾಶವಾಗಿ ಹೋಗಿವೆ. ಅನೇಕ ಗ್ರಾಮಗಳಲ್ಲಿ ಜಲ ವಿಶೇಷವಾಗಿ ಉಕ್ಕಿ ಬಂದು ನುಮಾರು 50-60 ಮನೆಗಳೇ ನಾಶವಾಗಿ ಹೋಗಿವೆಯೆಂದು ಅಂದಾಜು ಮಾಡಬಹುದು. ಅಂತಹ ಕಷ್ಟ ಸಮಯದಲ್ಲಿ ಟೆಂಪೊರರಿ ರಿಲೀಫನ್ನಾದರೂ ಸರ್ಕಾರದವರು ನೊಂದವರಿಗೆ ಸ್ಥಳದಲ್ಲಿಯೇ ಮಾಡಿಕೊಡದಿದ್ದರೆ ನಮ್ಮ ರೈತರು ಅಲ್ಲಿ ನೆಲಸುವಹಾಗೆಯೇ ಇಲ್ಲ. ಎಲ್ಲಕ್ಕಿಂತಲೂ ಹೆಚ್ಚಾಗಿ ದನಕರುಗಳ ನಷ್ಟವಂತೂ ಹೇಳತೀರದು. ಮತ್ತು 18, 19, 20 ನೆಯ ತಾರೀಖುಗಳಲ್ಲಿ ವಿಪರೀತ ನಷ್ಟವಾಯಿತು ಎಂಬುದಾಗಿ ಹೇಳಿದ್ದಾರೆ. ನುಮಾರು ಎರಡು ಮೂರು ಸಾವಿರ ದನಗಳು ನತ್ತಿವೆ. ಅದಕ್ಕಾಗಿ ಮೈಸೂರು ಡಿಸ್ಟ್ರಿಕ್ಟಿಗೆ ಬಂದು ದನಗಳನ್ನು ಕೊಂಡುಕೊಳ್ಳಬೇಕಾಗಿದೆ. ಅದಕ್ಕೆ ನೀವು ದುಡ್ಡು ಕೊಡಬೇಕು. ತಾವು ಕೊಡುವ ಸಹಾಯ ಒಂದು ಹೆಚ್ಚಿನ ಮಟ್ಟದಲ್ಲಿರಬೇಕು. ಈಗ ಕೇವಲ ಎರಡುಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆಂದು ಹೇಳಿದ್ದೀರಿ. ಅದನ್ನು ಕೂಡಲೇ ಅಲ್ಲಿಗೆ ಕಳುಹಿಸಿ. ಯಾವ ಫಾರ್ಮಾಲಿಟಿ ಇಲ್ಲದೆ ಒಡನೆಯೇ ಕಳುಹಿಸಿ. ಬಡ ರೈತರಮೇಲೆ ಕೃಪೆಯಿಟ್ಟು ಮುಫತ್ತಾಗಿ ಕಾಳನ್ನು ಹಂಚಿ ಬಡ್ಡಿ ಇಲ್ಲದೆ ಸಾಲವನ್ನು ಹೆಚ್ಚಿಗೆ ಕೊಡಿ. ಅವರು ಏನಾದರೂ ಕೂಲಿ ಮಾಡಿಕೊಂಡು ಬದುಕುತ್ತಾರೆ. ಚೆನ್ನಾಗಿ ಅನ್ನ ಊಟಮಾಡುತ್ತಾರೆ. ಈ ರೀತಿ ಮಾಡದೆ ನುಮ್ಮನೆ ಪತ್ರವ್ಯವಹಾರ ಮಾಡಿದರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಒಡನೆಯೇ ಅಲ್ಲಿಹೋಗಿ ಬಡ ರೈತರಿಗೆ ಹಣ ಕೊಟ್ಟರೆ ಅವರು ತಮ್ಮ ಭೂಮಿಯನ್ನು ನೋಡುತ್ತಾರೆ. ಕೆಲವರು ನಮ್ಮಲ್ಲಿ 19 ನೆಯ ತಾರೀಖು ಹೋಗಬೇಕಾಗಿತ್ತು. ಇಲ್ಲಿ ಅಸೆಂಬ್ಲಿ ಇತ್ತು. ಅದರಿಂದ ಏನೂ ಪ್ರಯೋಜನವಾಗಲಿಲ್ಲ. ಅಂತಹ ಕಷ್ಟಕಾಲದಲ್ಲಿಯೇ ನಾವು ಅಲ್ಲಿಗೆ ಹೋಗಬೇಕಾಗಿತ್ತು. ನಾವು ಎಲ್ಲಿ ಹೋಗುವುದಕ್ಕೂ ಆಗಲಿಲ್ಲ. ಅಂತಹ ಪರಿಸ್ಥಿತಿ ಒದಗಿತ್ತು. ಈಗ ನೀರೆಲ್ಲಾ ಇಳಿದಿದೆ. ಇಂತಹ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಅದೇನೆಂದರೆ ನಾಳೆ ಆಥವಾ ನಾಡಿದ್ದು ಅಸೆಂಬ್ಲಿಯನ್ನು ಕ್ಲೋಜ್ ಮಾಡುತ್ತೀರಿ. ಆಗ ಎಲ್ಲಿ ಡಿಸ್ಪೆನ್ಸ್ ಆಗಿದೆಯೋ ಅಲ್ಲಿಗೆ ಹೋಗಿ 5-10 ದಿವಸಗಳ ಕಾಲ ಅಲ್ಲಿಯೇ ಇದ್ದು ಅಲ್ಲಿನ ಜನಗಳ ಕಷ್ಟ ನಷ್ಟಗಳೇನು, ಅದಕ್ಕೆ ತ್ವರಿತ ರಿಲೀಫ್ ಏನು ಎಂಬುದನ್ನು ಯೋಚನೆಮಾಡಿ ಅಲ್ಲಿಯೇ ಅವರಿಗೆ ಹಣ ಸಹಾಯ ಮಾಡಿದರೆ ಬಡ ಜನ ಬಹಳ ಚೆನ್ನಾಗಿ ಕೆಲಸ ಮಾಡುತ್ತಾರೆ. ಮುಖ್ಯವಾಗಿ ಮಂತ್ರಿಗಳು ತಾವೇ ಖುದ್ದುಹೋಗಿ ನೋಡಬೇಕು. ಎಲ್ಲೆಲ್ಲಿ ಅಫೆಕ್ಟ್ ಆಗಿದೆಯೋ ಅಲ್ಲೆಲ್ಲಾ ಐದೈದು ನಿಮಿಷಗಳಾದರೂ ಕುಳಿತು ಒಡನೆಯೇ ಯಾವೊಂದು ಫಾರ್ಮಾಲಿಟಿ ಇಲ್ಲದೆಯೇ ಅವರಿಗೆ ಹಣ ಸಹಾಯ ಮಾಡಬೇಕು. ರೈತರಿಗೆ ಯಾವತ್ತೂ ಸಾಲ ಕೊಡಬೇಕು. ಕೋ-ಆಪರೇಟಿವ್ ಸೊಸೈಟಿಯ ಮೂಲಕ ತಕಾವಿ ಸಾಲವನ್ನೂ ಕೊಡಬೇಕು ಆದರೆ ಸ್ವತ್ತು ಕಳೆದುಕೊಂಡಿದ್ದಾನೆ. ಸಾಲ ಕೊಡುವುದಕ್ಕಾಗುವುದಿಲ್ಲ ಎಂದು ಮಾತ್ರ ಹೇಳಬಾರದು. ಎರಡು ಸಾವಿರ ರೂಪಾಯಿಗಳ ಬೆಲೆಬಾಳತಕ್ಕ ಸ್ವತ್ತನ್ನು ಕಳೆದುಕೊಂಡಿದ್ದರೆ, ಅಂತಹವರಿಗೆ ಕನಿಷ್ಠಪಕ್ಷ ತ್ವರಿತ ಪರಿಹಾರವೆಂದು ಒಂದು ಸಾವಿರ ರೂಪಾಯಿಗಳನ್ನಾದರೂ ಕೊಡಬೇಕು. ಸಾಲ ಕೊಟ್ಟ ಮೇಲೆ 3 ವರ್ಷಗಳ ಮೇಲೆ ಅವರನ್ನು ಕೇಳಬೇಕು. 3 ವರ್ಷಗಳವರೆಗೆ ಕೊಟ್ಟ ಸಾಲವನ್ನು ಅವರಿಂದ ತೆಗೆದುಕೊಳ್ಳಬಾರದೆಂದು ನಾನು ತಮ್ಮಲ್ಲಿ ಅತಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಏಕೆಂದರೆ ನನ್ನ ಮಟ್ಟಿಗೆ ಈಗ್ಗೆ ವರ್ತಮಾನ ಬಂದಿದೆ ಈಗಾಗಲೇ ನಮ್ಮ ಕಡೆ 80—90 ಲಕ್ಷ ರೂಪಾಯಿ

(ಶ್ರೀ ಕೆ. ಎಂ. ದೇವಯ್ಯ)

ಗಳ ನ್ಯತ್ತು ನಷ್ಟವಾಗಿದೆ. ಎಂದು ಇದನ್ನೆಲ್ಲಾ ತಾವು ಯೋಚನೆ ಮಾಡಿ ಈ ಸಭೆಯನ್ನು 29ನೆಯ ತಾರೀಖು ಆಡ್‌ಜರ್ನ್ ಮಾಡಿ ಸದಸ್ಯರಿಗೆ ಅವರವರ ಕ್ಷೇತ್ರಗಳಿಗೆ ಹೋಗುವುದಕ್ಕೆ ಅವಕಾಶ ಮಾಡಿಕೊಟ್ಟದ್ದು ಬಹಳ ಉತ್ತಮವಾಯಿತು. ನಾವೂ ನೀವೂ ಈ ಪರಿಸ್ಥಿತಿಯನ್ನು ಚೆನ್ನಾಗಿ ನೋಡಿ ನಿಜವಾದ ಎಸ್ಟಿಮೇಟನ್ನು ಮಾಡಿ, ಅದಕ್ಕೇನು ಸಹಾಯ ಮಾಡಬೇಕೋ ಅಂಥಾದ್ದನ್ನು ಸರ್ಕಾರದವರು ಕೂಡಲೇ ಮಾಡಬೇಕೆಂದು ನಾನು ಅತಿ ವಿನಯದಿಂದ ಮತ್ತೊಮ್ಮೆ ಸರ್ಕಾರವನ್ನು ಬೇಡುತ್ತೇನೆ. ಸರ್ಕಾರದವರು ಇಪ್ಪೊತ್ತಿನವರೆಗೆ ಎಷ್ಟೋಕಡೆಗಳಲ್ಲಿ ಹಣ ಸಹಾಯವನ್ನು ಮಾಡಬೇ ಇದ್ದಾರೆ. ಅದರಿಂದ ತುಂಬಾ ತೊಂದರೆಯಾಗುತ್ತದೆ. ಸರ್ಕಾರದವರು ಕೂಡಲೇ ಅಲ್ಲಿಗೆ ಹಣ ಸಹಾಯ ಮಾಡಬೇಕೆಂದು ಸರ್ಕಾರೀ ಆಜ್ಞೆ ಮಾಡಿದರೇನೇ ಅವರಿಗೆ ತಾತ್ಕಾಲಿಕ ಪರಿಹಾರ ದೊರೆಯುತ್ತದೆ. ನಮ್ಮ ಕೊಡಗಿನ ಭಾಗದಲ್ಲಿ ಎಷ್ಟೋ ಭೂಮಿ ಉತ್ತಮ ಮಾಡಬೇಕು. ಆದರೆ ಹೆಚ್ಚು ವಿತರಣೆಯಿಂದ ಮಾಡುವುದಕ್ಕಾಗುವುದಿಲ್ಲ; ಬಹಳ ನಷ್ಟವಾಗಿದೆ. ತಾವು ಇಷ್ಟು ವ್ಯವಸ್ಥೆಯನ್ನು ಮಾಡಬೇಕು. ದುಡ್ಡು ಇಲ್ಲ, ಎತ್ತುಗಳಿಲ್ಲ, ಬೀಜ ಇಲ್ಲ ಎಂದು ಹೇಳುವವರಿಗೆ ಕೂಡಲೇ ಆ ಸೌಕರ್ಯಗಳನ್ನು ಒದಗಿಸಬೇಕು. ವಿಶೇಷವಾದ ಗಾಳಿ, ಮಳೆಯಿಂದ ಏಷ್ಟೋ ದನ, ಕರುಗಳು ನತ್ತು ಹೋಗಿವೆ. ನೂರು ಇಂಚು ಮಳೆಯಾಗಿದೆ. ಈಗ ಅನೇಕರು ಎತ್ತುಗಳನ್ನು ಕೊಂಡು ಕೊಳ್ಳಬೇಕು. ಅನಂತರ ವ್ಯವಸಾಯ ಮಾಡಬೇಕು. ಸೆಪ್ಟಂಬರ್ 10ರೊಳಗೆ ಭೂಮಿ ಚೆನ್ನಾಗಿ ಆಗುತ್ತದೆನ್ನಬಹುದು. ಆದುದರಿಂದ ಈ ಸಂದರ್ಭದಲ್ಲಿ ಭಾಷಣ ಮಾಡುವ ಕಾಲವಲ್ಲ. ಮುಖ್ಯವಾಗಿ ಸರ್ಕಾರದವರು ಈ ಪ್ರವಾಹ ಪೀಡಿತರಾಗಿ ನೊಂದವರಿಗೆ ಅದರಲ್ಲೂ ಬಡ ಜನಗಳಿಗೆ ಹೆಚ್ಚಿಗೆ ಹಣ ಸಹಾಯ ಮಾಡಿ ನಮ್ಮ ಕೊಯ್ನಿನವರಿಗೆ ವಿಶೇಷವಾಗಿ ಉಪಕಾರ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*Sri H. V. KOUJALGI (Sampagaon I).—Mr. Speaker, Sir, I am greateful to the Revenue Minister for having given us a full report about the damage caused by floods in the various parts of the State both to life and property. So far as the report pertaining to Belgaum district is concerned, in my opinion, it is rather inadequate. They have simply stated in two or three sentences that there is a loss of 438 houses and damage worth a few lakhs of rupees was caused. I have received information during the last two or three days that in Sampagaon taluk, in three villages alone 500 houses have fallen. The information is from the Panchayets of the area. Of course, this report may be concerning some previous dates also because every day damage is caused and the loss is continuing. But, I may say that more houses than what is given in the report have fallen and more damage is caused.

And speaking in connection with my constituency that is Sampagoan which consists of the villages of Kasagaon and Bail-Hongal wherein the Malaprabha flows, it has caused great havoc. I may say that this Malaprabha river causes great damage every year to nearly 50 to 60 villages which are on the banks of this river. Especially this year, the floods were constant from the 1st of July. The floods are still there even today and communication to many of these villages has been completely cut off and they have become just like islands. The result is, that cattle cannot come out for grazing because there is constant rain and the houses are mud-roofed houses and they are falling down every day. As I said in the beginning, many of the houses have fallen in this area. Especially, Sir, I may say this river has caused much damage to Sanguli, Singankoppa and Thigadamallur. The suffering of the people is very bad. Due to excessive rains, crops have also been damaged and some of the lands are also not yet sown. Due to late sowing, it is doubtful whether they would get good crops. Of course, I need not tell you about these damages. But I want to make one or two suggestions so far as these affected people are concerned. Many of my friends have suggested that takavi loans should be given very liberally. But before takavi loan is given, I want to make one suggestion that the Government should issue in the first place an order not to recover the takavi loans already granted and that is due from them. The local officers only observe the rules, because it is only in the case of assessment suspended that recovery is suspended. Where assessment is not suspended, recovery is made; even society dues, all other dues are recovered. I therefore request the Government to issue a general order not to collect any of the existing dues, whether it is due to societies or takavi loans. Of course, those who are well to do and not affected may be able to pay and in

their case recovery may be effected. The Government officers should use their discretion and they should see that people are not troubled on account of these recoveries.

Secondly, these takavi loans should also be quite liberal. Thirdly, for the poor people who have lost their houses and who require immediately some money to repair or r e b u i l d their huts, s h o u l d be given f r e e. The R e p o r t says that sums from Rs. 10 to Rs. 100, the officers are asked to give according to merits of the case. But I am told that they are only giving Rs. 10. They are not using their discretion. Because they seem to think that if more money is given, they are likely to be asked to furnish explanation. I submit, Sir, that they should be asked to give these loans liberally as far as possible. On this occasion may I also say, Sir, that tin sheets are a dire necessity for rebuilding houses? In B e l g a u m District, the position is that tin sheets are purchased not by the Government but by the various co-operative societies or development societies and these institutions have not funds of their own. So they cannot purchase in sufficient quantities. That is the difficulty. What I therefore submit is, that Government should, advance, loans to these societies and see that a sufficient number of sheets are purchased and distributed at nominal prices or if necessary free of cost according to the policy laid down in this behalf. What I want to bring to the notice of the Government is that they should see that a sufficient number of tin sheets are available for the use of the public.

One more point I want to bring to the notice of the Government and the Revenue Minister in particular—unfortunately the P.W. Minister is not here—in order to see that communications are not dislocated in abnormal times such as flood, etc.; and at many of these places where there is a causeway they should see that big bridges are constructed. For example in my own place near Gokak, a big bridge is being constructed to avoid any possible disruption of communication. Even that has gone under water. It only goes to show that the plans that are made are not proper. For example, even the bridge near Mugutganhubli which is on the Poona-Bangalore road, has been under water for weeks together. That may be because our engineers do not seem to take into consideration the highest floods. I wanted to tell the Government that in order to see that communications are not cut off due to floods, they should see that high bridges are constructed—for example the bridge near G o k a k or Lods. The bridges should be constructed at a height that floods cannot affect them. If bridges also come under submersion during floods, that goes to show that the plans are defective. For example the bridge at Mugutganhubli which is on the high way between Poona—Bangalore Road, is u n d e r water. That is the point. This point should be kept in mind by the P. W. Minister as a long term measure because money is wasted if communication is dislocated.

Many r e m e d i e s have b e e n suggested by various people such as appointing a committee or f o r m i n g some board. It is time for the Government to take some long term measure in order to see that in future people are not afflicted by floods, because we have witnessed that since 1914 we have seen such floods for the fourth time this year. Villages have been washed away. It is, therefore much better that the Government should consider this on a long range basis, and see that these villages are not put to loss.

The last point is that many of these villages are on the banks of the river and every fifth or sixth year, we hear of floods ravaging the countryside in this area. It, therefore, becomes necessary to think of a drastic remedy in terms of shifting these villages to some higher level not reached by the flood waters. Whenever big projects are undertaken, we always hear of villages being submerged and those villagers are shifted and rehabilitated. So also here, plans and estimates are there. The question of shifting the villages is there. I think the best way for the Government is that the problem

(SRI H. V. KOUJALGI)

of these people should be considered just like that of refugees. Government should construct houses for them and either they should be given long-term loans on an instalment basis and whenever any compensation is to be paid, the same may be set off against them. Then only it is possible for these villagers to shift and permanent relief can be afforded to these flood-ravaged villages. Otherwise people residing on the banks are put to a great loss. The time has come when Government should consider this question seriously.

With these remarks, I thank the Chair for having given me an opportunity to speak.

*ಶ್ರೀ ಬಿ. ಆರ್. ಪಾಟೀಲ್ (ಹಾನಗಲ್).—ಮಾನ್ಯ ಅಧ್ಯಕ್ಷರೇ, ನಮ್ಮ ಧಾರವಾಡ ಜಿಲ್ಲೆಯಲ್ಲಿರುವ ವರದಾನದಿ ಮತ್ತು ಧರ್ಮಾನದಿ ಅಲ್ಲದೆ ಹಾನಗಲ್ ತಾಲ್ಲೂಕಿನಲ್ಲಿನ ಕೆರೆಗಳಿಂದ ಉಂಟಾಗಿರುವ ಅನಾಹುತದ ಪರಿಣಾಮ ವಿಷಯವಾಗಿ ಕೆಲವೊಂದು ಸೂಚನೆಗಳನ್ನು ಹೇಳಲು ಬಯಸುತ್ತೇನೆ. ಮಾನ್ಯ ಮಂತ್ರಿಗಳು ಪ್ರವಾಹ ಪೀಡಿತ ಪ್ರದೇಶದ ಬಗ್ಗೆ ಒದಗಿಸಿರುವ ಮಾಹಿತಿ ಪತ್ರಿಕೆಯಲ್ಲಿ ವರದಾನದಿಯ ಉಲ್ಲೇಖ ಮಾತ್ರ ಇದೆ. ಆದರೆ ನಮ್ಮ ತಾಲ್ಲೂಕಿನಲ್ಲಿ ಬಹು ಮುಖ್ಯವಾದ ವರದಾನದಿಯ ಜೊತೆಗೆ ಧರ್ಮಾನದಿಯು ಇದೆ. ಈ ಧರ್ಮಾನದಿಯ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಈ ಎರಡೂ ನದಿಗಳ ಪ್ರವಾಹದಿಂದ ಅನಾಹುತ ಉಂಟಾಗಿದೆ. 1924ನೆಯ ಇಸವಿಯಲ್ಲಿ ಒಂದು ಮಹಾಪೂರ ಬಂದಿತ್ತು. ಆದರೆ ಇಂದಿನ ವರೆಗೆ ಬಾರದೇ ಇದ್ದಂಥ ಮಹಾಪೂರ ಈಸಾರಿ ಬಂದಿದೆ. ವರದಾನದಿಯ ಉಲ್ಲೇಖ ಮಾತ್ರ ಬಂದಿದೆ. ಆದರೆ ಧರ್ಮಾನದಿಯ ಉಲ್ಲೇಖ ಬಂದಿಲ್ಲ. ವರದಾನದಿಯ ದಂಡೆಯ ಮೇಲಿನ 21 ಹಳ್ಳಿಗಳು ಮತ್ತು ಧರ್ಮಾನದಿಯ ಮೇಲಿನ 20-25 ಗ್ರಾಮಗಳು ಈ ಪ್ರವಾಹದ ನಾಶಕ್ಕೆ ತುತ್ತಾಗಿವೆ. ನಮ್ಮ ಹಾನಗಲ್ ತಾಲ್ಲೂಕಿನಲ್ಲಿ ಸುಮಾರು 1,100 ಕೆರೆ ಕಟ್ಟೆಗಳಿವೆ. ಇವುಗಳಲ್ಲಿ ನೂರಕ್ಕೆ ಎಪ್ಪತ್ತೈದರಷ್ಟು ಅಂದರೆ 800 ಕೆರೆಕಟ್ಟೆಗಳು ಒಂದಿಲ್ಲೊಂದು ರೀತಿಯಲ್ಲಿ ಕೊಚ್ಚಿಕೊಂಡುಹೋಗಿ ನಾಶವಾಗಿವೆ. ಅನೇಕ ಏರಿ ಒಡೆದಿವೆ. ದಿಬ್ಬ ನಾಶವಾಗಿವೆ. ಆದುದರಿಂದ ಈ ಎಲ್ಲ ಕೆರೆಗಳ ತೀವ್ರ ದುರಸ್ತಿ ಮಾಡುವುದು ಅಗತ್ಯವಾಗಿದೆ. ನಮ್ಮ ಹಾನಗಲ್ ತಾಲ್ಲೂಕಿನಲ್ಲಿ ಬತ್ತ ಮುಖ್ಯ ಪೀಕು ಆಗಿದೆ. ಈಗ ಬತ್ತ ಬಿತ್ತುವ ದಿನಗಳು ಈಗಾಗಲೇ ಮುಗಿದೆ ಹೋಗಿವೆ. ಬತ್ತ ಬಿತ್ತನೆಗೆ ಬೀಜ ಒದಗಿಸಿದರೆ ಉಪಯೋಗವಾಗುವ ದಿಲ್ಲ. ಆದಕಾರಣ ಜಪಾನಿ ಪದ್ಧತಿಯ ಪ್ರಕಾರ ಟ್ರಾನ್ಸ್‌ಪ್ಲಾಂಟೇಷನ್ ಅಂದರೆ ಬತ್ತದ ಸಸಿಗಳನ್ನು ಎಲ್ಲಿಂದಾದರೂ ತಂದು ನೆಡುವುದು ಇದೊಂದೇ ಪದ್ಧತಿ ಸಾಧ್ಯವಿದೆ. ದಕ್ಷಣ ಅಥವಾ ಉತ್ತರ ಕನ್ನಡ ಜಿಲ್ಲೆಯಿಂದ ಭತ್ತದ ಸಸಿಗಳನ್ನು ತರಿಸಿಕೊಡುವ ವ್ಯವಸ್ಥೆ ಬಿಡಬೇಕಾಗಿದೆ. ಸುಮಾರು 25,000 ಎಕರೆ ಬತ್ತದ ಭೂಮಿ ಪ್ರವಾಹದಿಂದ ನಾಶವಾಗಿದೆಯೆಂದು ಅಂದಾಜಾಗಿದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಭತ್ತದ ಭೂಮಿ ನಾಶವಾಗಿದೆ ಇಷ್ಟು ಭೂಮಿಗೆ ಬೀಜ ಕೊಟ್ಟರೆ ಏನೂ ಸಹಾಯವಾಗುವುದಿಲ್ಲ. ಆದುದರಿಂದ ಸರಕಾರದವರು ಬತ್ತದ ಸಸಿಯನ್ನು ಒದಗಿಸುವ ವ್ಯವಸ್ಥೆ ಮಾಡಲು ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ನಮ್ಮ ತಾಲ್ಲೂಕಿನಲ್ಲಿಯ ಕೆರೆಗಳ ದುರಸ್ತಿ ಕೆಲಸವನ್ನು ಜಾಗ್ರತೆ ತೆಗೆದುಕೊಳ್ಳಬೇಕು. ಇದರ ಜೊತೆಗೆ ರಸ್ತೆ ಸೇತುವೆ ದುರಸ್ತಿ ಕೆಲಸ ಜಾಗ್ರತೆ ಸಹ ಆಗಬೇಕಾಗಿದೆ. ಈ ಕೆಲಸವನ್ನು P.W.D. ಗೆ ಒಪ್ಪಿಸಿದರೆ ಅಷ್ಟು ತೃಪ್ತಿಕರವಾಗಿ ಸಾಗುವಂತಿಲ್ಲ. ಆದುದರಿಂದ ಹಾನಗಲ್ ತಾಲ್ಲೂಕಿಗೆ ಪ್ರತ್ಯೇಕವಾಗಿ ಒಂದು P.W.D. Sub-Division ಕೂಡಲೇ ರಚಿಸಬೇಕು ಮತ್ತು ಈ ಕೆಲಸ ಮಾಡಿಸಬೇಕು. ಈ ರೀತಿ ಮಾಡಬೇಕಾದುದು ಈ ಸಂದರ್ಭದಲ್ಲಿ ಅತ್ಯಂತ ಜರೂರಾಗಿದೆ. ನಮ್ಮ ತಾಲ್ಲೂಕಿನಲ್ಲಿ ಹಾಗು ಧಾರವಾಡ ಜಿಲ್ಲೆಯಲ್ಲಿ ಪ್ರವಾಹದ ಅನಾಹುತದಿಂದ ಉಂಟಾಗಿರುವ ಹಾನಿಯ ಬಗ್ಗೆ ಕೊಟ್ಟಿರುವ ವರದಿ ಅಷ್ಟೊಂದು ಸರಿಯಾಗಿಲ್ಲವೆಂದು ಹೇಳಬೇಕಾಗಿದೆ. ಇಷ್ಟೇ ನಾಶವಾಗಿದೆ ಎಂದು ಹೇಳಲಿಕ್ಕೆ ಬರುವಂತಿಲ್ಲ. ಸಾಮಾನ್ಯವಾಗಿ ಅಪಾರ ನಾಶವಾಗಿದೆ. ಇನ್ನು ಮುಂದೆ ಅಧಿಕಾರಿಗಳು ಎಲ್ಲವನ್ನು ಪರಿಶೀಲಿಸಿ ಅಂಕ ಅಂಶಗಳನ್ನು ಒದಗಿಸಿದ ಮೇಲೆ ನಿರ್ದಿಷ್ಟವಾಗಿ ತಿಳಿಯಬಹುದು. ಈಗ ಬಂದಿರುವ ವರದಿಯ ಪ್ರಕಾರ ತಿಳಿಯುವಂತಿಲ್ಲ. ಆದುದರಿಂದ ಅಂದಾಜು ಮಾಡಿ ನೂಕ್ತ ಪರಿಹಾರ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಕೆಲವು ಮಾನ್ಯ ಸದಸ್ಯರು ಮಾತನಾಡುತ್ತಾ ಇಂಥ ನರೆಯ ಹಾವಳಿಯಿಂದ ತಪ್ಪಿಸಲಿಕ್ಕೆ ಏನೇನು ಮಾಡಬೇಕು ಎಂಬುದಕ್ಕೆ ಸೂಚನೆ ಮಾಡಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಲಖನಾಪೂರ, ಹಲಸೂರು, ಹಾವೇರಿ, ಬ್ಯಾತನಾಳ ಈ ಊರುಗಳಿಗೆ ಅನೇಕ ಸಾರಿ ಪ್ರವಾಹದಿಂದ ತೊಂದರೆಯಾಗಿದೆ. ನನಗೆ ಜ್ಞಾಪಕವಿರುವ ಹಾಗೆ 1924 ರಲ್ಲಿ ಮತ್ತು 1953 ರಲ್ಲಿ ಪ್ರವಾಹ ಬಂದಾಗ್ಗೆ ದೋಣಿಯಲ್ಲಿ ಹೋಗಿ ಬಂದಿರುವುದು ನನಗೆ ಗೊತ್ತಿದೆ. ಜನರು ಈಗ ಇರತಕ್ಕ ಸ್ಥಳವನ್ನು ಬಿಟ್ಟು ಬೇರೆ ಕಡೆ ಊರು ಮಾಡಿಕೊಂಡು ಇದ್ದರೆ ಚೆನ್ನಾಗಿರುತ್ತದೆ. ಬೇರೆ ಕಡೆ ಜಾಗಾ ಕೊಡುತ್ತೇವೆ. ಹೋಗಿ ಎಂದರೂ ಸ್ಥಿತಿವಂತರು ಜಾಗ ಬಿಟ್ಟು ಕೊಡಲು ಮನಸ್ಸಿಲ್ಲ. ಅದರಿಂದ ಬಡ ಜನರೂ ಸಹ ಜಾಗ ಬಿಟ್ಟು ಹೋಗುವುದಕ್ಕೆ ತಯಾರಾಗುವದಿಲ್ಲ. ಎಲ್ಲ ಕಡೆ ಇದೇ ರೀತಿಯಾದ ಸನ್ನಿವೇಶವಿದೆ. ನದಿಯ ದಂಡೆಯ ಮೇಲಿನ ಹಳ್ಳಿಗಳಲ್ಲಿ ಪ್ರವಾಹ ಏರುವ ಲಿಮಿಟ್‌ನಲ್ಲಿ ವಾಸ ಮಾಡಬಾರದು ಎಂದು ಕಾನೂನು ಪಾಸ್ ಮಾಡಿ ಇಂಥ ಪ್ರದೇಶದಲ್ಲಿರತಕ್ಕ ಜನರಿಗೆ ವಾಸಕ್ಕೆ ಬೇರೆ ಜಾಗ ಕೊಟ್ಟು ಕಳಿಸಬೇಕಾಗಿದೆ. ಈ ವ್ಯವಸ್ಥೆಯನ್ನು ಕಾನೂನಿನ ಮುಖಾಂತರ ಮಾಡಬೇಕು. ಏಕೆಂದರೆ ಬೇರೆ ರೀತಿಯಿಂದ ಇದು ಸಾಧ್ಯವಿಲ್ಲ. ಮಹಾಪೂರ ಬರುವ ಪ್ರದೇಶದಲ್ಲಿ ಫ್ಲಡ್‌ರೋನ್ ಎಂದು ಗೊತ್ತು ಮಾಡಿ ಅಲ್ಲಿಂದ ನೂರು ಫೂಟುಬಿಟ್ಟು ದೂರ ವಾಸ ಮಾಡಬೇಕು ಎಂದು ಕಾನೂನು ಮಾಡಬೇಕು. Flood Zone Act ಎಂದು ಇದಕ್ಕೆ ಹೆಸರು ಇಡಬಹುದು. ಹೀಗೆ ಮಾಡಿದರೆ ಪ್ರಾಣಹಾನಿ ಆಗುವುದು ತಪ್ಪುತ್ತದೆ. ಇದಲ್ಲದೆ ಇನ್ನೊಂದು ವ್ಯವಸ್ಥೆ ಮಾಡಬೇಕಾದ ಅಗತ್ಯವಿದೆ. ಅದೇನೆಂದರೆ ಮಹಾಪೂರ ಬರುವ ಸ್ಥಳಗಳಲ್ಲಿ ಅಥವಾ ಹತ್ತಿರದಲ್ಲಯೇ ದೊರೆಯುವ

ಹಾಗೆ ಲಾಂಚೆಸ್ ಇಡುವ ಏರ್ಪಾಡು ಮಾಡಬೇಕು. ಲಾಂಚೆಸ್ ಇಟ್ಟು ಅದರ ವ್ಯವಸ್ಥೆಯನ್ನು ನೋಡಿ ಕೊಳ್ಳುವುದು ದುಸ್ತರವಾದ ಕೆಲಸವಾಗಿದೆ. ಆದುದರಿಂದ ಅಂಥ ಪ್ರದೇಶದಲ್ಲಿ ವಾಸಮಾಡುವದನ್ನೇ ಕಾನೂನು ಪ್ರಕಾರ ನಿಷೇಧಿಸಬೇಕು. ಬ್ಯಾತನಾಳ ಮತ್ತು ಹಲಸೂರು ಗ್ರಾಮದ ಜನರು ಬೇರೆ ಕಡೆಗೆ ಹೋಗದೆ ಜುಗುಪ್ಸೆಯಿಂದ ಅಲ್ಲಿಯೇ ಇದ್ದಾರೆ. ಈ ಸಾರಿ ಪ್ರವಾಹ ಬಂದಾಗ್ಗೆ ಅಲ್ಲಿಯ ಜನರನ್ನು ದೋಣಿಯಿಂದ ಬೇರೆ ಸ್ಥಳಕ್ಕೆ ಸಾಗಿಸುವುದಕ್ಕೆ ಬಹಳ ತೊಂದರೆಯಾಯಿತು. ಈ ಕೆಲಸದಲ್ಲಿ ತಹಸೀಲದಾರ್ ಸಬ್‌ಇನ್‌ಸ್ಪೆಕ್ಟರ್ ಬಹಳ ಸಹಾಯ ಮಾಡಿದ್ದಾರೆ. ಅನೇಕ ಜನರ ಪ್ರಾಣ ಉಳಿಸಿದ್ದಾರೆ. ತೊಂದರೆಗೊಳಗಾದ ಅಲ್ಲಿಯ ಜನರಿಗೆ ಬೇರೆ ಕಡೆ ಜಮೀನುಕೊಟ್ಟು ಯೋಗ್ಯ ಪರಿಹಾರಕೊಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಹೀಗೆ ನಷ್ಟಕ್ಕೆ ತುತ್ತಾದಂಥ ಜಮೀನುಗಳಲ್ಲಿ ಏನು ಮಾಡಲಿಕ್ಕೂ, ಪೀಕು ಬೆಳೆಯಲಿಕ್ಕೂ ಸಾಧ್ಯವಿಲ್ಲ. ಅಂಥ ಜಮೀನುಗಳಬಗ್ಗೆ ಹಪ್ತೆ ವಸೂಲಿ ಮುಂದಿನ ವರ್ಷ ಮಾಡಬಾರದು. ನಮ್ಮ ತಾಲ್ಲೂಕಿನ ವಿಷಯವಾಗಿ ಹೇಳಬೇಕಾದರೆ, ಇವೊತ್ತು Transplanting ನಲುವಾಗಿ ಬತ್ತದ ನಸಿಯನ್ನು ಕಳಿಸಿಕೊಟ್ಟು ಅದಕ್ಕೆ ಅತ್ಯವಶ್ಯ ವಿದ್ದಂಥ fertilizers ಎಂದರೆ ರಾಸಾಯನಿಕ ಗೊಬ್ಬರಗಳನ್ನು ಕೊಟ್ಟರೆ 15 ದಿವಸ ಅಥವಾ ಒಂದು ತಿಂಗಳು ತಡವಾದರೂ, ಪೂರ್ತಿಯಾಗಿ ನಷ್ಟವಾಗುವುದಕ್ಕಿಂತ ಕೆಲವುಮಟ್ಟಿಗಾದರೂ ನಮ್ಮಬವಣೆಯನ್ನೂ ನೀಗಿಸಿಕೊಳ್ಳಬಹುದು. ನೂರು ಚೀಲ ಬೆಳೆಯುವ ಕಡೆ 40 ಚೀಲವಾದರೂ ಬೆಳೆಯಬಹುದು ಎನ್ನುವ ಅಭಿಪ್ರಾಯವಿದೆ. ಈ ವಿಷಯವನ್ನು ಮಾನ್ಯ ಮಂತ್ರಿಗಳು ಗಮನದಲ್ಲಿಟ್ಟು ನಸಿಗಳನ್ನು ತಂದು ಕೊಡಲಿಕ್ಕೆ ಸಾಧ್ಯವಿದ್ದರೆ ತರಿಸಿಕೊಡಬೇಕು.

ಇನ್ನೂ ಒಮ್ಮೆ ನಾನು ಈಗಾಗಲೇ ಹೇಳಿದಂತೆ ಕಾನೂನಿನ ಪ್ರಕಾರ Flood Zone ನಲ್ಲಿ ಜನರು ವಾಸಿಸುವುದನ್ನು ನಿಲ್ಲಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಮತ್ತು ಸರ್ಕಾರದಲ್ಲಿ ವಿನಂತಿ ಮಾಡಿಕೊಂಡು ನನಗೆ ಮಾತನಾಡಲು ಅನ್ಪದ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸುತ್ತೇನೆ.

Sri A. R. PANCHAGAVI (Gokak).— Sir, I come from an area which has suffered severe damage owing to the recent floods and rains. Gokak taluk, where Ghataprabha flows, has been hit and there is also heavy rainfall besides floods. 14 to 15 villages are affected by floods. The 1953 floods ought to have served as a warning but in spite of our efforts, we were unable to shift the several villagers from potential by dangerous areas. After the 1953 floods, the villagers could not find suitable sites elsewhare and in some places though suitable sites were afforded, people were unwilling to shift. Those living in low-lying areas, particularly the Harijans and poorer sections, moved out but the rich living in the centre of the village in well-built houses were reluctant to move out of the village. When floods sorround the villages, the rich are also affected and even the well-built houses cannot give them sufficient security against the revages of flood.

This time, we were anxiously expecting the floods to recede. The Deputy Commissioner and his Assistant rushed to Gokak. We also had a motor launch but it was not much useful. There were moments of extreme anxiety in regard to the lives of the people and cattle. Damage to properties was stupendous. Heads of cattle, haystacks, huts, etc., were washed out. Sometimes it became difficult to rescue people, though we knew that they were in dongerous conditions. We stood by as helpless spectators. We had recrudescence of floods in 1908, 1914 and 1953. We have been extending help to the people to build houses but such aid has not been useful. We should prevent people from building up teenments in areas which are potentially dangerous. A boundary should be marked and people prohibited from putting up houses or tenments there.

Sir, we should be prepared to meet all eventualities. This time we felt helpless though we had four boats at Gokak. Three of them were destroyed due to the negligence of the staff working there. The D. L. B. authorities had the boats, but there had been no elections for the last three years, and the staff there had become careless. They just drew their salaries and neglected their work. One boat was burnt and another was allowed to sink before the eyes of everyone. One boat struck agains' a bridge and is damaged. The onl/ boat available could not manage the situation. We could not visit any of the villages in spite of our best attempt. The motor launch brought by the Deputy Commissioner was very small and he could also not do much. I, therefore, submit that all arrangements should exist for flood relief operations and public property should not be allowed to be damaged in this manner.

(SRI A. R. PANCHAGAVI)

We are giving aid to the scheduled castes and backward classes to build houses. It is my experience that some of the amounts we give is not wisely spent because houses are built in danger zones and are washed away with every flood. Similarly money given for construction of schools and other purposes should not be used for putting up buildings in areas which are likely to be affected by floods. We should not give funds even if the villagers contribute or are earnest in their demand. Such buildings should be put up only in safe places.

My friend Sri Koujalgi explained how some bridges are being constructed at random here and there. Unfortunately two of these bridges were taken up for construction when the floods were expected. The bridge on the Markandeya river was undertaken against a warning of so many people that it should be taken up at a later stage. Not only that; the embankments were washed out and the bridge stood in the middle of the river without any connection at both ends and since the old bridge had been dismantled there was no passage available to the people except to go by ferry. Gokak town was thus cut off from three sides. Similar things have happened in other places also.

